# ತಪೋವಾಣಿ

ಸಂ. 6 ಸಂ. 1 ಜನವರಿ 2009 ರೂ.15

ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

ಮೊದಲಿಗೆ, ನಾನು ಪ್ರತಿಯೊಬ್ಬರಿಗೂ ಹೊಸ ವರ್ಷದ ಶುಭಾಶಯಗಳನ್ನು ಬಯಸುತ್ತೇನೆ. ಇವು ಕೇವಲ ಔಪಚಾರಿಕ ಅಥವಾ ಸಾಂಪ್ರದಾಯಿಕ ಅಲ್ಲ. ಇವು ನನ್ನ ಹೃದಯದಿಂದ ಬರುವ ತುಂಬು ಪದಗಳು. ಈ ಭೂಮಿಯಲ್ಲಿ ಇರುವ ಎಲ್ಲರಿಗೂ ಈ ವರ್ಷ ಶಾಂತಿ, ಸಂತೋಷ ಮತ್ತು ಪ್ರೀತಿಗಳನ್ನು ತುಂಬಲಿ. ಇವು ಖಂಡಿತ ತುಂಬುತ್ತವೆ. ನಾವು ನಿಜವಾಗಿಯೂ ಇವುಗಳು ಬೇಕು ಎಂದು **ಆಯ್ಕೆಮಾಡಿದಾಗ**. ನಾವು ಶಾಂತಿಯನ್ನು ಆಯ್ಕೆಮಾಡಬೇಕು, ಪ್ರೀತಿಯನ್ನು ಆಯ್ಕೆಮಾಡಬೇಕು. ನಾವು ಬೆಳಕನ್ನು ಆಯ್ಕೆಮಾಡಬೇಕು. ನಮ್ಮ ಅಂತರಾಳದಲ್ಲಿ ಇವುಗಳನ್ನು ಆಯ್ಕೆಮಾಡಬೇಕು.

ನಾವು ಇವುಗಳನ್ನು ಒಳಗಿನಿಂದ ನಿಜವಾಗಿಯೂ ಆಯ್ಕೆಮಾಡಿದಾಗ, ಎಲ್ಲರೂ ಇಲ್ಲದಿದ್ದರೂ ಅನೇಕ ಮಂದಿ ಆಯ್ಕೆಮಾಡಿದಾಗ, ಈ ವಿಶ್ವ ಇವುಗಳನ್ನು ನಮಗೆ ಒದಗಿಸಲು ಸಹಾಯಮಾಡುತ್ತದೆ. ಸಂದೇಹವೇ ಇಲ್ಲ. ಇವು ನನ್ನ ಮಾತುಗಳಲ್ಲ. ಮೇಲಿನ ಲೋಕಗಳಲ್ಲಿರುವ ಋಷಿಗಳ ಮಾತುಗಳು.

ನಾವು ಹಲವನ್ನು ಆಯ್ಕೆಮಾಡಿದಾಗ, ಹಲವನ್ನು ಸಹಜವಾಗಿ ನಿರಾಕರಿಸುತ್ತೇವೆ. ನಾವು ಹಿಂಸೆಯನ್ನು, ದ್ವೇಷವನ್ನು ಮತ್ತು ಅ–ಪ್ರೇಮವನ್ನು ನಿರಾಕರಿಸಬೇಕು. ಬೆಳಕನ್ನು ಆಯ್ದುಕೊಂಡು ಕತ್ತಲನ್ನು ದೂರ ತಳ್ಳಬೇಕು. ಬೆಳಕನ್ನು ಆಯ್ದುಕೊಂಡು, ನಾವು ಬೆಳಕನ್ನು ಸುತ್ತಲೂ ಹರಡಬಹುದು. ಬೆಳಕು ಅಂದರೆ ಶಾಂತಿ. ಬೆಳಕು ಅಂದರೆ ಪ್ರೀತಿ. ಬೆಳಕನ್ನು ನಾವು ಸುತ್ತಲೂ ಹರಡಿದಾಗ, ಹಿಂಸೆ ಮುಂತಾದವುಗಳು ಸಹಜವಾಗಿ ಮಾಯವಾಗಿ, ನಾವು ಶಾಂತಿ–ಪ್ರೀತಿಗಳಿಂದ ತುಂಬಿರುವ ಹೊಸ ಯುಗವನ್ನು ಪ್ರವೇಶಿಸುತ್ತೇವೆ. ಅದಕ್ಕಾಗಿ 2012ರಲ್ಲಿ, ವಿಶೇಷ ಶಕ್ತಿವಲಯವಾದ ಫೋಟಾನ್ ಬೆಲ್ಟನ್ನು ಪ್ರವೇಶಿಸಲು ಕಾದುಕೂರಬೇಕಾಗಿಲ್ಲ. ಮತ್ತೆ, ಇವು ನನ್ನ ಮಾತುಗಳಲ್ಲ. ಇವುಗಳು ಋಷಿಗಳ ಮತ್ತು ಬೆಳಕನ್ನು ಚಾನೆಲ್ ಮಾಡುತ್ತಿರುವ ಸಾವಿರಾರು ಬೆಳಕಿನ ಕಾರ್ಯಕರ್ತರ ಮಾತುಗಳು.

ನಾವು ಪ್ರತಿಯೊಬ್ಬರೂ ಬೆಳಕನ್ನು ಆಯ್ದುಕೊಂಡು, ಬೆಳಕನ್ನು ಹರಡಿ, ಹೊಸ ಯುಗವನ್ನು ಸ್ಥಾಪಿಸಬಹುದು.

---

ಮುಂಬೈನ ಆತಂಕದ ಹಲ್ಲೆಗಳ ಬಗ್ಗೆ ನನಗೆ ಅನೇಕರು ಬರೆದಿದ್ದಾರೆ, ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ನನ್ನಲ್ಲೂ ಬಹಳ ದುಗುಡವಿದೆ, ನನ್ನಲ್ಲೂ ಹಲವು ಪ್ರಶ್ನೆಗಳಿವೆ. ಮುಂಬೈ ಅನುಭವಿಸಿದ ನೋವಿನ ಕಂಪನಗಳು ನನ್ನನ್ನು ಬಡಿದು ಮಂಕಾಗಿಸಿದಾಗ, ನಾನು ಮತ್ತೆ ಕೆಲಸವನ್ನು ಮುಂದುವರೆಸಬೇಕಾದರೆ ಸ್ವಲ್ಪ ಸಮಯ ಬೇಕಾಯಿತು.

ನಾನು ಒಬ್ಬ ಆಧ್ಯಾತ್ಮಿಕ ಮಾರ್ಗದರ್ಶಿ. ನಾವು ಕೇವಲ ಆಧ್ಯಾತ್ಮಿಕ ದೃಷ್ಟಿಯಿಂದ ಮಾತನಾಡುತ್ತೇನೆ. ವಿಫಲರಾದ ರಾಜಕೀಯ ಮತ್ತು ಮತಗಳ ನಾಯಕರುಗಳ ಬಗ್ಗೆ ನಾನು ಮಾತನಾಡಲು ಇಷ್ಟಪಡುವುದಿಲ್ಲ. ಈ ಮಟ್ಟದಲ್ಲಿ ನಾವೆಲ್ಲಾ ತಿಳಿದಿರುವ ವಿಷಯಗಳ ಬಗ್ಗೆ ಮಾತನಾಡಲು ಇಷ್ಟಪಡುವುದಿಲ್ಲ. ಆದರೆ, ಆಧ್ಯಾತ್ಮಿಕ ದೃಷ್ಟಿಯಿಂದ ಕೆಲವು ಮಾತುಗಳನ್ನು ಸ್ಪಷ್ಟವಾಗಿ ಹೇಳಲು ಇಷ್ಟಪಡುತ್ತೇನೆ. ಈ ಘಟನೆ ಒಂದು ಎಚ್ಚರಿಕೆಯ ಕರೆ. ಎಲ್ಲರೂ ಒಟ್ಟಾಗಿ, ಎಲ್ಲ ವಿಂಗಡಗಳ ಮೇಲೇರಿ ಕಪ್ಪು ಶಕ್ತಿಗಳನ್ನು ವೈಯಕ್ತಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಮಟ್ಟಹಾಕಲು ಬಂದ ಎಚ್ಚರಿಕೆಯ ಕರೆ. ಅಧಿಕಾರದಲ್ಲಿರುವವರು ಕ್ಷೀಣ ಸ್ವರದಲ್ಲಿ ಕೂಗಾಡಿದರೇ ಹೊರತು, ಸರಿಯಾದ ಕೆಲಸ ನಡೆಯಲೇ ಇಲ್ಲ. ಇದು ದುಃಖಕರ.

ನಾಯಕರುಗಳಿಂದ ನಾನು ಹೆಚ್ಚೇನೂ ನಿರೀಕ್ಷಿಸುವುದಿಲ್ಲ. ಆದರೆ ಮುಂಬೈ ಬೀಚ್‌ನಲ್ಲಿ ನೆರೆದ ಸಾವಿರಾರು ವ್ಯಕ್ತಿಗಳ ಕಣ್ಣೀರು, ಆಕ್ರೋಶ ಮತ್ತು ಬದಲಾವಣೆಗಾಗಿ ತೀವ್ರವಾಗಿ ಗೂಳಿಟ್ಟ ಮೊರೆಯಲ್ಲಿ ಆಶಾಕಿರಣಗಳನ್ನು ಕಾಣುತ್ತಿದ್ದೇನೆ. ಈ ಕಣ್ಣೀರು–ಮೊರೆ ನಿರರ್ಥಕವಾಗುವುದಿಲ್ಲ. ಇವುಗಳಿಂದ ಎದ್ದ ಶಕ್ತಿಯ ಕಂಪನಗಳು ಅಲೆಯಾಗಿ ಬೆಳೆಯುತ್ತಿವೆ. **ಈ ಅಲೆ** ಬದಲಾವಣೆಯನ್ನು ತರುತ್ತದೆ. ಇದು ಖಂಡಿತ.

ಹೊಸ ವರ್ಷ ಎಲ್ಲಾ ಬದಲಾವಣೆಗಳನ್ನೂ ತರಲಿ. ■

ಮಾನಸ ಫೌಂಡೇಷನ್ (ರಿ)
ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ 562 149. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ–ಮೇಲ್: info@saptarishis.com ವೆಬ್–ಸೈಟ್: www.saptarishis.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಸಾಯಿ ಮಂಡಳಿ, ಸಂಪಿಗೆ ರೋಡ್,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



2008ರ ಬೆಂಗಳೂರು ಪುಸ್ತಕೋತ್ಸವದಲ್ಲಿ ನಮ್ಮ ವಾಲಂಟಿಯರ್‌ಗಳು ವಿನ್ಯಾಸಮಾಡಿ, ನಿರ್ವಹಿಸಿದ ನಮ್ಮ ಸ್ಟಾಲ್.

### ಸುದ್ದಿ-ಸೂಚನೆ

- 14-11-2008 ರಿಂದ 23-11-2008ರವರೆಗೆ ನಡೆದ ಬೆಂಗಳೂರು ಪುಸ್ತಕೋತ್ಸವದಲ್ಲಿ ನಮ್ಮ ಭಾಗವಹಿಸುವಿಕೆ ಹೆಚ್ಚು ಪರಿಣಾಮಕಾರಿ ಯಾಗಿತ್ತು. ನಮ್ಮ ಪುಸ್ತಕಗಳು ನೂರಾರು ಜನರನ್ನು ತಲುಪಿದವು. ಧ್ಯಾನದ ಬಗ್ಗೆ ವಿಚಾರಣೆ ಎಣಿಕೆ ಇಲ್ಲದಷ್ಟಿತ್ತು. ಬೆಳಕಿನ ಸಂಚಲನದ 'Animation' ಯೋಜನೆ, ನಮ್ಮಲ್ಲಿಗೆ ಭೇಟಿ ನೀಡಿದ ಎಲ್ಲರ ಗಮನವನ್ನು ಸೆಳೆದು, ಎಲ್ಲರೂ ಅದರ ಬಗ್ಗೆ ಮಾಹಿತಿ ಪಡೆದುಕೊಂಡರು.
- ಇಂದಿರಾನಗರದಲ್ಲಿರುವ ನಮ್ಮ ಧ್ಯಾನಕೇಂದ್ರದಲ್ಲಿ ಸಾಧಕರಾಗಿರುವ ಶ್ರೀ. ರಾಜನ್‌ರವರು ಬೆಂಗಳೂರು ಪುಸ್ತಕೋತ್ಸವದಲ್ಲಿ 20-11-2008 ರಂದು ಒಂದು ನೂರು 'ಬೆಳಕಿನಲ್ಲಿ ಬದುಕುವುದು' ಪುಸ್ತಕಗಳನ್ನು ಪ್ರಾಯೋಜಿಸಿದರು. ಆ ದಿನ ನಮ್ಮಲ್ಲಿಗೆ ಭೇಟಿ ನೀಡಿದವರಿಗೆ ಈ ಪುಸ್ತಕವನ್ನು ಉಚಿತವಾಗಿ ಹಂಚಲಾಯಿತು.
- ಬೆಳಕಿನ ಸಂಚಲನದ 'Animation' ಅನ್ನು ಮಹಾತ್ಮಗಾಂಧಿ ರಸ್ತೆ, ಅನಿಲ್‌ಕುಂಬ್ಳೆ ವೃತ್ತ ದಲ್ಲಿರುವ LED Hoarding ಮೇಲೆ ನವಂಬರ್ 19 ರಿಂದ 28 ರವರೆಗೆ ಪ್ರದರ್ಶಿಸಲಾಯಿತು.
- ಸೂರ್ಯಗ್ರಹಣ ವಿಶೇಷ ಧ್ಯಾನವನ್ನು 26-1-2009ರಂದು ಬೆಳಿಗ್ಗೆ 11.06 ರಿಂದ 3.22ರವರೆಗೆ ತಪೋನಗರದಲ್ಲಿ ಏರ್ಪಡಿಸಿದೆ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 04 | ಭಾನು | ಶುಕ್ಲ ಅಷ್ಟಮಿ |
| 06 | ಮಂಗಳ | ಶುಕ್ಲ ದಶಮಿ |
| 11 | ಭಾನು | ಪೂರ್ಣಿಮಾ |
| 14 | ಬುಧ | ಉತ್ತರಾಯಣ ಪುಣ್ಯಕಾಲ ಪ್ರಾರಂಭ |
| 18 | ಭಾನು | ಕೃಷ್ಣ ಅಷ್ಟಮಿ |
| 24 | ಶನಿ | ಮಾಸ ಶಿವರಾತ್ರಿ |
| 26 | ಸೋಮ | ಅಮಾವಾಸ್ಯೆ, ಸೂರ್ಯಗ್ರಹಣ |

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 2-11-2008 | ರಾಜಶ್ರೀ ಪಡಕಿ |
| 9-11-2008 | ನಿಖಿಲ್ ಕೆ. ಎಸ್ ಮತ್ತು ವಿಲಾಸ್ ಖೇಡೇಕರ್ |
| 16-11-2008 | ಗೋದಾ ಶ್ರೀನಾಥ್ ಮತ್ತು ಹರಿಕೃಷ್ಣನ್ |
| 23-11-2008 | ಗುರುಪ್ರಸಾದ್ ಮತ್ತು ಅಳಗಿರಿಸಾಮಿ |
| 30-11-2008 | ರವಿ ಜಿ.ಹೆಚ್ ಮತ್ತು ಆರ್ತಿ ಕೆನ್ನಿ |

**ಈ ತಿಂಗಳ ವಾರ್ತಾಪತ್ರಿಕೆಗಳನ್ನು ಪ್ರಾಯೋಜಿಸಿದವರು**
**ಶ್ರೀ. ವಿಜಯಕುಮಾರ್,**
**ಶ್ರೀ ಕೆ.ಇ. ಮೂರ್ತಿ ಮತ್ತು ಉಷಾ ಸತೀಶ್‌ಚಂದ್ರ**

**"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.**

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು | – ಉಪನ್ಯಾಸಗಳು<br>ಬೆಳಿಗ್ಗೆ 11 ರಿಂದ 11.30<br>ವಿಶೇಷ ಧ್ಯಾನ<br>ಮಧ್ಯಾಹ್ನ 12 ರಿಂದ 1 |
| ಶುಕ್ರವಾರಗಳು | – ಸತ್ಸಂಗ ಬೆಳಿಗ್ಗೆ 11 ರಿಂದ 12<br>ಲೈಟ್ ಚಾನೆಲ್ ಕಾರ್ಯ<br>12 ರಿಂದ 1 |
| 11ರಂದು | – ಶಂಬಲ ಗ್ರೂಪ್ ಮೀಟಿಂಗ್<br>ಮಧ್ಯಾಹ್ನ 2 ಗಂಟೆಗೆ |
| 26ರಂದು | – ಸೂರ್ಯಗ್ರಹಣ ವಿಶೇಷ ಧ್ಯಾನ<br>ಬೆಳಿಗ್ಗೆ 11.06 ರಿಂದ<br>ಮಧ್ಯಾಹ್ನ 3.22 |

**ಶಂಬಲ ಗ್ರೂಪ್-ಹೊಸ ತಂಡ 11-1-2009ರಂದು ಪ್ರಾರಂಭವಾಗುತ್ತದೆ. ದೂರಕಲಿಕೆ ಸಾಧಕರು ಕೂಡ ಸೇರಬಹುದು.**

**ರಿಜಿಸ್ಟ್ರೇಶನ್‌ಗೆ ಕೊನೆಯ ದಿನಾಂಕ 31-12-2008. ವಿವರಗಳಿಗೆ ಮಾನಸ ಆಫೀಸನ್ನು ಸಂಪರ್ಕಿಸಿ.**

**ತಪೋನಗರದಲ್ಲಿ 31-12-2008ರಂದು ಬೆಳಿಗ್ಗೆ6 ರಿಂದ ಸಂಜೆ 6ರವರೆಗೆ ಅಖಂಡ ಧ್ಯಾನವನ್ನು ಏರ್ಪಡಿಸಿದೆ. ಎಲ್ಲರಿಗೂ ಸ್ವಾಗತ.**

### ತಪೋನಗರ ಡೈರಿ

ನವಂಬರ್ ತಿಂಗಳಲ್ಲಿ ಹವಾಮಾನ ಹೀಗೆ ಎಂದು ಹೇಳಲಾಗುತ್ತಿರಲಿಲ್ಲ. ಚಳಿಯಲ್ಲಿಯೂ ಆಕಾಶದಲ್ಲಿ ಮೋಡಗಳ ನಡುವೆ ಸೂರ್ಯ ತನ್ನ ಕಿರಣಗಳನ್ನು ಬೀರುತ್ತಲಿದ್ದ. ಆ ಎಲ್ಲಾ ವೈಪರೀತ್ಯಗಳು ಇದ್ದಾಗಲೂ ತಪೋನಗರ ಎಂದಿನಂತೆ ತನ್ನ ಪ್ರೀತಿ ಮತ್ತು ಶಾಂತಿಗಳಿಂದ ಕಂಗೊಳಿಸುತ್ತಿತ್ತು.

ಈ ತಿಂಗಳಲ್ಲಿ ಹಲವಾರು ಯೋಜನೆಗಳು ಕಾರ್ಯಾರಂಭಗೊಂಡವು. ಮಕ್ಕಳ ಉದ್ಯಾನವನ, ಆಂಜನೇಯ ದೇವಸ್ಥಾನ ಮತ್ತು ಎಲ್ಲಮ್ಮ ದೇವಸ್ಥಾನಗಳ ಕಟ್ಟಡಗಳು ಶುರುವಾದವು. ಈ ಎಲ್ಲಾ ಕೆಲಸಗಳು ಭರದಿಂದ ಸಾಗುತ್ತಿರುವ ರೀತಿ ನಮ್ಮನ್ನು ಆಶ್ಚರ್ಯಚಕಿತರನ್ನಾಗಿಸಿತು, ಪ್ರಸ್ತುತ ಕಾಲಚಕ್ರದ ಉರುಳುವಿಕೆ ಕೂಡಾ ನಿಧಾನವೆನಿಸಿತು.

ಇದೇ ತಿಂಗಳಲ್ಲಿ ಪ್ರಜ್ಞಾ-ಸಂಚಲನ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಯಿತು. ಬೆಂಗಳೂರು ಪುಸ್ತಕೋತ್ಸವದಲ್ಲಿ ವಿಶ್ವ ಸಂಚಲನ ಬೆಳಕಿನ ಕಾರ್ಯದ Animation ಪ್ರದರ್ಶನ; ಹೊರಾಂಗಣ ಡಿಜಿಟಲ್ ಜಾಹೀರಾತು ಮತ್ತು ಆಕಾಶವಾಣಿ ಜಾಹೀರಾತುಗಳಿಂದ ಹೊಸ ಹೊಸ ಸಾಧಕರು ತಪೋನಗರದ ಬಾಗಿಲನ್ನು ತಟ್ಟುತ್ತಿದ್ದಾರೆ. ಪ್ರತಿಯೊಬ್ಬರನ್ನೂ ತಪೋನಗರ ಸ್ವಾಗತಿಸುತ್ತದೆ ಏಕೆಂದರೆ ಇಡೀ ಪ್ರಪಂಚ ತಪೋನಗರವಾಗಬೇಕು. ಎರಡನೆಯ ಶಂಬಲವಾಗಿ ಅರಳುತ್ತಿರುವ ಈ ತಪೋನಗರ ದಿವ್ಯಪ್ರೀತಿಯ ಆಗರ.

ತಿಂಗಳ ಕೊನೆಯ ದಿನ ಧ್ಯಾನಿಗಳು ಮಾಡಿದ ಮೂರು ಗಂಟೆಗಳ ನಿರಂತರ ಧ್ಯಾನದಿಂದ ತಪೋನಗರ ದಿವ್ಯ ಬೆಳಕಿನಲ್ಲಿ ಮಿಂದಿತ್ತು.

## ಅಡೆ–ತಡೆಗಳಾಚೆ

**ಶೋಭ ಕೆ.ರಾವ್, ಅನು: ಕೆ. ರಾಮಚಂದ್ರ**

ಈ ಭೂಮಿಯ ಮೇಲಿನ ಜೀವನ ಒಂದು ಸವಾಲು ಮತ್ತು ಕ್ಲಿಷ್ಟಕರ ಕೂಡ. ಬೇಡದ ವಿಷಯಗಳಲ್ಲಿ ನಮ್ಮನ್ನು ನಾವು ತೊಡಗಿಸಿ ಕೊಂಡು, ಕೆಲವನ್ನು ಅತಿಯಾಗಿ ಮಾಡುತ್ತಾ ನಮ್ಮ ಜೀವನದಲ್ಲಿ ಕಷ್ಟಗಳನ್ನು ನಮಗೆ ನಾವೇ ತಂದುಕೊಂಡಿದ್ದೇವೆ. ಸೃಷ್ಟಿಕರ್ತನ ದಿವ್ಯ ನಾಟಕದಲ್ಲಿ ನಾವು ವಿವಿಧ ಪಾತ್ರಗಳನ್ನು ವಹಿಸಬೇಕು ಮತ್ತು ಆಯಾ ಪಾತ್ರದ ಪಾವಿತ್ರ್ಯತೆಯನ್ನರಿತು ನಾವು ಅದರಂತೆ ಪಾತ್ರಗಳನ್ನು ನಿರ್ವಹಿಸಬೇಕು. ಇದು ನಮ್ಮ ಮುಂದಿರುವ ಸವಾಲು.

ವರ್ಷಗಳು ಉರುಳಿದಂತೆ ಮತ್ತು ಯುಗಗಳು ಬದಲಾದಂತೆ, ಜೀವನ ಶೈಲಿಯಲ್ಲಿ ಬದಲಾವಣೆ ಗಳಾಗುತ್ತವೆ. ಇದರ ಅರಿವು ಮತ್ತು ಜ್ಞಾನ, ಬದಲಾದ ಜೀವನಕ್ಕೆ ಹೊಂದಿಕೊಳ್ಳಲು ಸಹಾಯ ಮಾಡುತ್ತದೆ. ಒಂದೊಂದು ಯುಗವೂ ತನ್ನದೇ ಆದ ವಿಶಿಷ್ಟ ಶಕ್ತಿಯ ಕಂಪನಗಳಿಂದ ತುಂಬಿರುತ್ತದೆ. ಅದರಂತೆ ಜೀವನದ ರೀತಿ–ನೀತಿಗಳೂ ಬದಲಾಗುತ್ತವೆ. ಸುಲಭವಾಗಿ ಒಂದು ರೀತಿಯ ಜೀವನ ಶೈಲಿಗೆ ನಾವು ಹೊಂದಿಕೊಂಡು ಅದು ಸದ್ಯದ ಕಾಲಮಾನಕ್ಕೆ ತಕ್ಕುದೋ ಇಲ್ಲವೋ ಎಂದು ಯೋಚಿಸದೆ ಮೊಂಡುತನದಿಂದ ಅದಕ್ಕೆ ಅಂಟಿಕೊಳ್ಳುತ್ತೇವೆ. ಪ್ರಳಯ ಅಥವಾ ತೀವ್ರ ಬದಲಾವಣೆಯ ಈ ಕಾಲಘಟ್ಟದಲ್ಲಿ ಈ ರೀತಿಯ ಜನ–ಜೀವನವನ್ನು ನಾವು ಗಮನಿಸಬಹುದು.

ಹಳೆಯ ಎಲ್ಲ ರೀತಿಯ ಜೀವನ ಶೈಲಿಯನ್ನು ಕಿತ್ತೊಗೆಯದೆ ನಮಗೆ ಬೇರೆ ದಾರಿಯೇ ಇಲ್ಲ. ಈ ಭೂಮಿಯ ಮೇಲಿನ ಎಲ್ಲ ರೀತಿಯ ಗೊಂದಲ ಮತ್ತು ಅಸ್ತವ್ಯಸ್ತತೆಗೆ ಕಾರಣವಾದ, ನಮ್ಮೊಳಗೆ ಮತ್ತು ನಮ್ಮ ಸುತ್ತಲೂ ನಾವೇ ಕಟ್ಟಿಕೊಂಡ ಎಲ್ಲ ಬಂಧನಗಳನ್ನೂ ನಾವು ಕಿತ್ತೊಗೆಯಲೇಬೇಕು. ನಾವು ಬೆಳಕಿನ ಯುಗದತ್ತ ಮುನ್ನಡೆಯುತ್ತಿದ್ದೇವೆ. ಆದ್ದರಿಂದ ಹೊಸ ರೀತಿಯ ಜೀವನ ಶೈಲಿ ಉದಯಿಸಲು ನಾವು ಅವಕಾಶಮಾಡಿಕೊಡಬೇಕು. ಮನುಕುಲ ಸತ್ಯಯುಗದ ರೀತಿ ನೀತಿಗಳನ್ನು ಒಪ್ಪಿಕೊಳ್ಳಬೇಕು. ಆಗ ಮಾತ್ರ ಬೆಳಕಿನೆಡೆಗಿನ ನೈಜ ಪಯಣ ಪ್ರಾರಂಭವಾಗುತ್ತದೆ.

ಇಂತಹ ಆಂದೋಳನ ಈಗಾಗಲೇ ಶುರುವಾಗಿದ್ದು ಕ್ರಮೇಣ ತೀವ್ರಗತಿಯನ್ನು ಪಡೆದು ಹೊಸ ಜಾಗತಿಕ ಪಂಥವನ್ನು ಹುಟ್ಟು ಹಾಕಿ ಈ ಭೂಮಿಯ ಮೇಲೆ ಬೆಳಕಿನ ಯುಗವು ಸ್ಥಾಪಿಸಲ್ಪಡುತ್ತದೆ. ■

## ಸಮೃದ್ಧಿ

**ಶ್ಯಾಮಲಾದೇವಿ, ಅನು: ಕೆ. ರಾಮಚಂದ್ರ**

"ಸಮೃದ್ಧಿ" ಎಂದರೆ ಹಣ ಮತ್ತು ಅದು ಶಾಂತಿ ಮತ್ತು ಶ್ರೀಮಂತಿಕೆ ತರುತ್ತದೆ ಎನ್ನುವ ಗುಂಗಿನಲ್ಲಿ ಮನುಷ್ಯ ಜೀವನ ಪರ್ಯಂತ ಪ್ರಾಪಂಚಿಕ ಸಂಪತ್ತಿಗಾಗಿ ಹೆಣಗುತ್ತಾನೆ. ಜೀವನದ ಮುಸ್ಸಂಜೆಯಲ್ಲಿ ತಾನು ನಂಬಿದ್ದ ಸಿರಿ–ಸಂಪತ್ತುಗಳಿಂದ ತನ್ನ ಕನಸುಗಳು ನನಸಾಗಲಿಲ್ಲ ಎಂದು ಅರಿತು ಸಂಕಟ ಪಡುತ್ತಾನೆ. ಸಿರಿವಂತಿಕೆಯಿದ್ದರೂ ಇನ್ನೂ ತಾನು ಬಡತನದ ಹಿಡಿತದಲ್ಲಿರುವುದನ್ನು ಮನಗಂಡು ನೋವನ್ನು ಅನುಭವಿಸುತ್ತಾನೆ.

ಸಮೃದ್ಧಿ ಪ್ರಾಪಂಚಿಕ ಮತ್ತು ಆಧ್ಯಾತ್ಮಿಕ ಸಂಪತ್ತುಗಳೆರಡನ್ನೂ ಒಳಗೊಂಡಿದೆ. ಜ್ಞಾನ, ವಿವೇಕ, ವೈರಾಗ್ಯ, ಪ್ರೀತಿ, ಶಾಂತಿ, ವೈಶಾಲ್ಯತೆ, ಅನುಕಂಪಗಳ ಸಮೃದ್ಧಿ ನಿಜವಾದ ಸಿರಿ–ಸಂಪತ್ತು. ವಾಸ್ತವವಾಗಿ ಗುಣಾತ್ಮಕ ಸಂಪತ್ತು, ಸಿರಿ–ಸಂಪತ್ತನ್ನು ಆಕರ್ಷಿಸುತ್ತದೆ. ಏಕಕಾಲದಲ್ಲಿ ಇವೆರಡನ್ನೂ ಗಳಿಸುವುದು ಅತ್ಯುತ್ತಮ ಮತ್ತು ಇದು ಋಷಿಗಳ ರೀತಿ.

ಸಿರಿಸಂಪತ್ತುಗಳ ಸಮೃದ್ಧಿಗೆ ತನ್ನದೇ ಆದ ಮಿತಿ ಇದ್ದು ನಮಗೆ ಸಿಗುವ ಪ್ರತಿಯೊಂದು ಉತ್ತಮ ಫಲಕ್ಕೂ ಗೊತ್ತಾದ ಪ್ರಮಾಣದ ಋಣಾತ್ಮಕ ಪರಿಣಾಮ ಜೊತೆಗೆ ಬರುತ್ತದೆ. ಇದೊಂದು ದೈವೀ ನಿಯಮ. ಮನುಷ್ಯ ಎರಡನ್ನೂ ಒಪ್ಪಿಕೊಂಡು ಫಲಾಫಲಗಳನ್ನು ಅನುಭವಿಸಬೇಕು. ಸಂಪತ್ತಿನ ಮಿತಿಯನ್ನು ಅಂತರಾತ್ಮದ ಸಲಹೆಯಿಂದ ಮಾತ್ರ ತಿಳಿಯಲು ಸಾಧ್ಯ, ಬೇರೆ ದಾರಿಯಿಲ್ಲ. ಪ್ರಾಪಂಚಿಕ ಸಮೃದ್ಧಿಯನ್ನು ಆಧ್ಯಾತ್ಮಿಕ ಸಮೃದ್ಧಿಯ ತಳಹದಿಯ ಮೇಲೆ ಸಂಪಾದಿಸಿದಲ್ಲಿ ಅವನಲ್ಲಿರುವ ಬೆಳಕು ಜವಾಬ್ದಾರಿ ಹೊತ್ತು ಮಾರ್ಗದರ್ಶಿಸುತ್ತದೆ.

ಅಂತಹ ವ್ಯಕ್ತಿ ಶ್ರೀಮಂತಿಕೆಯ ಅಧಿಕಾರ ಚಲಾಯಿಸುವುದಿಲ್ಲ. ಅದು ದೇವರ ಸಂಪತ್ತೆಂದು ತಿಳಿದು ಧರ್ಮದರ್ಶಿಯಂತೆ ಕಾರ್ಯ ನಿರ್ವಹಿಸುತ್ತಾನೆ. ತನ್ನಲ್ಲಿರುವುದನ್ನು ಎಲ್ಲರೊಂದಿಗೆ ಹಂಚಿಕೊಳ್ಳುವುದು ಮತ್ತು ಇತರರ ಬಗ್ಗೆ ಕಾಳಜಿ ಅವನ ಜೀವನದ ರೀತಿಯಾಗಿ, ಅನಂತ ಸಮೃದ್ಧಿಯನ್ನು ಆಕರ್ಷಿಸುತ್ತಾನೆ. ದೇವರು ಅವನ ಮೇಲೆ ಸಮೃದ್ಧಿಯ ಮಳೆಗರೆಯುತ್ತಾನೆ. ಅವನು ಸದಾ ವಿನಮ್ರನಾಗಿದ್ದು ಭಗವಂತನ ಸಮೃದ್ಧಿ ಹರಿಯಲು ಒಂದು ಸಾಧನವಾಗಿ, ಇಡೀ ಮನುಕುಲ ಅವನಿಂದ ಪ್ರಯೋಜನ ಪಡೆಯುತ್ತದೆ. ಅನೇಕರು ದಿವ್ಯ–ಸಮೃದ್ಧಿಯನ್ನು ಆಕರ್ಷಿಸುವ ಸಾಧನವಾದಾಗ ಇಡೀ ಮನುಕುಲವೇ ಶ್ರುತಿ ಗೊಳ್ಳುತ್ತದೆ. ಕಟ್ಟಕಡೆಯದಾಗಿ ನಾವು ತಿಳಿಯಬೇಕಾದುದು ಇಷ್ಟೇ – "ಸಮೃದ್ಧಿಯಿಂದ ಬದುಕುವುದು ಎಲ್ಲರ ಹಕ್ಕು, ಆಯ್ದ ಕೆಲವರದಲ್ಲ." ■

## ಲೈಟ್ ಚಾನಲ್ಸ್

### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಸಂಗ್ರಹ: ರಾಘವೇಂದ್ರ ಸೋಮಯಾಜಿ, ಅನು: ಶಿವಪ್ರಕಾಶ್ ಎಲ್.)

**02–11–2008**

ಸೃಷ್ಟಿಯ ಮೊದಲು ನಿಶ್ಚಲತೆಯಿತ್ತು. ನಿಶ್ಚಲತೆಯಿಂದ ಬೆಳಕು ಹುಟ್ಟಿತು. ಬೆಳಕಿನಿಂದ ಪ್ರಜ್ಞೆ ಹುಟ್ಟಿತು. ನಂತರ ಸೃಷ್ಟಿ ಉಂಟಾಯಿತು. ಸೃಷ್ಟಿಯಲ್ಲಿಯೂ ಕೂಡಾ ನಿಶ್ಚಲತೆಯಿದೆ. ಆ ನಿಶ್ಚಲತೆಯಿಂದ ಮೊದಲ ಶಬ್ದ, 'ಪ್ರಣವ' ಹುಟ್ಟಿತು. ಓಂಕಾರವು ಉದ್ಭವಿಸಿದಲ್ಲೆಲ್ಲಾ ಗ್ಯಾಲಾಕ್ಸಿಗಳು ಜನಿಸಿದವು. ಅನಂತವಾದ ನಿಶ್ಚಲತೆ ಈಗಲೂ ಇದೆ. ಈ ನಿಶ್ಚಲತೆಯನ್ನು ನಮ್ಮ ಆನಂದಮಯ ಕೋಶದೊಳಗೆ ಹೊಂದಿದ್ದೇವೆ. ಭೌತಿಕ ಮಟ್ಟದಲ್ಲಿ ನಿಶ್ಚಲತೆಯನ್ನು ಸ್ಥಾಪಿಸಲು ನಾವು ಧ್ಯಾನ ಮಾಡುತ್ತೇವೆ. ಇದರಿಂದ ನಮ್ಮೊಳಗೆ ಇರುವ ನಿಶ್ಚಲತೆಯೊಂದಿಗೆ ಸಂಪರ್ಕ ಪಡೆಯಲು ಸಾಧ್ಯವಾಗುತ್ತದೆ. ನಮ್ಮೊಳಗಿನ ನಿಶ್ಚಲತೆಯೊಂದಿಗೆ ಸಂಪರ್ಕ ಪಡೆದಾಗ ವಿಶ್ವದ ನಿಶ್ಚಲತೆಯೊಂದಿಗೆ ಸಂಪರ್ಕ ಹೊಂದುತ್ತೇವೆ. ನಿಶ್ಚಲತೆಯಲ್ಲಿ ಸಂಪೂರ್ಣ ಜಾಗೃತಿ ಮತ್ತು ಸಮಗ್ರತೆ ಇರುತ್ತವೆ; ದೇವರು ಅಥವಾ ಋಷಿಗಳನ್ನು ಸಂಪರ್ಕಿಸಲು ನಾವು ಎಂತಹ ವಿಶೇಷ ಪ್ರಯತ್ನವನ್ನೂ ಮಾಡಬೇಕಾಗಿಲ್ಲ. ಸಂಪರ್ಕ ತಾನಾಗಿಯೇ ಉಂಟಾಗುತ್ತದೆ.

ನಿಶ್ಚಲತೆ, ಪ್ರೀತಿ ಮತ್ತು ಬೆಳಕುಗಳನ್ನು ನಾವು ಅನುಭವಿಸಬೇಕು. ಅನುಭವ ಮಾತ್ರ ನಿಜವಾದ ಜ್ಞಾನವನ್ನು ತರುತ್ತದೆ. ಅನುಭವವಿಲ್ಲದೆ ನಾವು ಕೇವಲ ಟೊಳ್ಳು.

ಇದು ಆಯ್ಕೆ ಮಾಡಿಕೊಳ್ಳುವ ಸಮಯ. ಅತ್ಯಂತ ಮಹತ್ವದ ಅವಕಾಶವಿದು. ಬಹುಶಃ ಕೊನೆಯ ಅವಕಾಶ. ನಾವು ಆಯ್ಕೆ ಮಾಡಿಕೊಳ್ಳಬೇಕಾದುದು ಯಾವುದು? ಪ್ರೀತಿ, ಸತ್ಯ, ವೈರಾಗ್ಯ, ಸಮರ್ಪಣೆ ಇವುಗಳನ್ನು ಹೊಂದಿರುವ ಬೆಳಕನ್ನು ಆರಿಸಿಕೊಳ್ಳಬೇಕು. ನಾವು ಬೆಳಕಿನ ಯುಗದೆಡೆಗೆ ಪ್ರವೇಶಿಸುತ್ತಿರುವುದರಿಂದ ಬೆಳಕನ್ನು ಆರಿಸಿಕೊಳ್ಳಬೇಕು. ಬೆಳಕನ್ನು ಆರಿಸಿಕೊಂಡಮೇಲೆ ವಿಶ್ವದಿಂದ ಸಹಾಯ ಬರುತ್ತದೆ. ನಮ್ಮನ್ನು ರಕ್ಷಿಸುವುದಲ್ಲದೆ ಪ್ರತಿಯೊಂದು ವಿವರದಲ್ಲಿ ಮಾರ್ಗದರ್ಶನ ದೊರೆಯುತ್ತದೆ ಮತ್ತು ಈ ಕಷ್ಟಕರವಾದ ಹಂತವನ್ನು ಸುಲಭವಾಗಿ ದಾಟುತ್ತೇವೆ. ಬೆಳಕನ್ನು ನಾವು ಆರಿಸಿಕೊಂಡಮೇಲೆ ಬೆಳಕಲ್ಲದುದನ್ನು ಸ್ವಾಭಾವಿಕವಾಗಿಯೇ ನಿರಾಕರಿಸುತ್ತೇವೆ.

ಆರಿಸಿಕೊಂಡರೆ ಸಾಕು ಏಕೆಂದರೆ ಅದು ಬಹಳ ಕಷ್ಟಕರವಾದುದು. ಗಂಟೆಗಟ್ಟಲೆ ಧ್ಯಾನ ಮಾಡುವುದು ಮುಖ್ಯವಲ್ಲ, ಪ್ರಜ್ಞಾಪೂರ್ವಕವಾಗಿ ಬೆಳಕನ್ನು ಆರಿಸಿಕೊಳ್ಳುವುದು ಮುಖ್ಯ. ಬೆಳಕಿನೊಡನೆ ಒಗ್ಗೂಡಿದವರೆಲ್ಲ ಸೂಕ್ಷ್ಮ ಹಂತದಲ್ಲಿ ಒಂದಾಗಿ ಸೇರುತ್ತಾರೆ. ಈ ಕಾರಣದಿಂದಲೇ ಈ ಮಟ್ಟದಲ್ಲಿ ಧೃವೀಕರಣವಾಗುತ್ತಿದೆ. ಬೆಳಕನ್ನು ಆರಿಸಿಕೊಳ್ಳದವರಿಗೂ ಸಹಾಯ ಮಾಡಲಾಗುವುದು, ಅವರಿಗೆ ಹೆಚ್ಚಿನ ಗಮನ ಮತ್ತು ಪ್ರೀತಿ ತೋರಿಸಲಾಗುವುದು. ಅವರನ್ನು ಪ್ರತ್ಯೇಕ ಮಾಡಿ, ಅಪಮಾನ ಮಾಡುವುದಿಲ್ಲ.

**09.11.2008**

ನಾನು ತುಂಬ ಇಷ್ಟಪಡುವ ದೇವರು ಕೃಷ್ಣ. ಹಿಂದೆ, ಕೃಷ್ಣನ ಬಗ್ಗೆ ಆಗಾಗ ಯೋಚಿಸುತ್ತಿದ್ದೆ ಮತ್ತು ಚೈತನ್ಯಗಳನ್ನು ಅರ್ಪಿಸುತ್ತಿದ್ದೆ. ಕೆಲವು ಸಲ ಸಂಪರ್ಕವೇರ್ಪಡುತ್ತಿತ್ತು. ಅಂಥ ಸಮಯದಲ್ಲಿ ಸಹಜವಾಗಿಯೇ ನಾನು ಭಾವುಕನಾಗುತ್ತಿದ್ದೆ. ಮತ್ತು ಅತ್ಯಂತ ತೃಪ್ತಿ ಮತ್ತು ಸಂಪೂರ್ಣತೆಗಳನ್ನು ಅನುಭವಿಸುತ್ತಿದ್ದೆ. ಕೃಷ್ಣನಿಂದ ಉತ್ತರಗಳು, ಸಂದೇಶಗಳು ಮತ್ತು ಸೂಚನೆಗಳನ್ನು ಪಡೆಯುತ್ತಿದ್ದೆ. ಒಂದು ದಿನ ನಾನು ಚೈತನ್ಯಗಳನ್ನು ಅರ್ಪಿಸುತ್ತಿದ್ದಾಗ ಕೃಷ್ಣನ ಆಕೃತಿ ಮರೆಯಾಯಿತು. ಆಕೃತಿಯ ಹೊರರೇಖೆ ಮಾತ್ರ ಇದ್ದು ಆಕೃತಿ ಕಾಣಿಸಲಿಲ್ಲ. ರೇಖಾಕೃತಿಯ ಒಳಗೆ ಬೆಳಕು ಮಾತ್ರ ಕಾಣಿಸುತ್ತಿತ್ತು. ಅದು ಸಾಮಾನ್ಯ ಬೆಳಕಾಗಿರಲಿಲ್ಲ, ಅತ್ಯಂತ ವಿಶೇಷವಾದ ಬೆಳಕಾಗಿತ್ತು. ಆ ಬೆಳಕು "ನಾನು ಕೃಷ್ಣ" ಎಂದಿತು. ಆಗ ಆರಾಧನೆ ನಿಂತು ಹೋಯಿತು. ಮುಂದೆ ನನಗೆ ಆರಾಧಿಸಲಾಗಲಿಲ್ಲ. ನಾನು ಬೆಳಕನ್ನು ಅನುಭವಿಸಿದೆ. ನಮ್ಮ ನಡುವೆ ಮಾಹಿತಿಯ ವಿನಿಮಯವಿರಲಿಲ್ಲ ಆದರೆ ನನಗೆ ಉತ್ತರಗಳು ತಿಳಿದಿದ್ದವು. ಆ ಸಮಯದಲ್ಲಿ ನನಗೆ ತಿಳಿಯಬೇಕಾಗಿದ್ದ ಎಲ್ಲವೂ ತಿಳಿದಿತ್ತು.

'ಕೃಷ್ಣ ಒಂದು ಬೆಳಕು' ಎಂದು ತಿಳಿದಾಗ ನಾವು ಅವನನ್ನು ಪ್ರಾರ್ಥಿಸುವುದಿಲ್ಲ, ಆರಾಧಿಸುವುದಿಲ್ಲ. ನಾವು ಅವನನ್ನು ಅನುಭವಿಸುತ್ತೇವೆ, ನಾವೇ ಅವನಾಗುತ್ತೇವೆ. ನಾವು ಅವನ ಪ್ರಜ್ಞೆಯಿಂದ ಕೂಡಿದ್ದಾಗ ಅದು ಕೃಷ್ಣಪ್ರಜ್ಞೆಯಾಗುತ್ತದೆ.

ನಾವು ಆಕೃತಿಗಳಿಗೆ ಅಂಟಿಕೊಳ್ಳುತ್ತೇವೆ ಮತ್ತು ಮೂರ್ತಿಗಳನ್ನು ಆರಾಧಿಸುತ್ತೇವೆ. ಮೂರ್ತಿಯನ್ನೇ ದೈವವೆಂದು ತಿಳಿಯುತ್ತೇವೆ. ಮೂರ್ತಿ ಕೇವಲ ಕಲ್ಲು ಅಲ್ಲ; ಇನ್ನೂ ಹೆಚ್ಚಿನದಾಗಿರುತ್ತದೆ. ನಾವು ಮೂರ್ತಿಯ ಕಲ್ಪನೆಗಿಂತ ಮುಂದೆ ಹೋದರೆ ನಿಜವಾದ ದೈವವನ್ನು ಸಂಧಿಸುತ್ತೇವೆ.

ನಾವು ದೇವರ ಪ್ರತಿಮೆಗೆ ಪೂಜೆ, ಅಭಿಷೇಕ ಮತ್ತು ಇತರ ಎಲ್ಲ ರೀತಿಯ ಆರಾಧನೆಗಳನ್ನು ಮಾಡಬಹುದು. ಇವು ತಪ್ಪಲ್ಲ ಆದರೆ ದೇವರನ್ನು ಕಾಣಲು ಆಕೃತಿಯ ಕಲ್ಪನೆಗಿಂತ ಮುಂದೆ ಹೋಗಬೇಕು. ಆಗ ಪ್ರಾರ್ಥನೆಗಳು ನಿಲ್ಲುತ್ತವೆ. ನಾವು ಪ್ರಾರ್ಥಿಸುವುದಿಲ್ಲ ಏಕೆಂದರೆ ದೇವರಿಗೆ ಎಲ್ಲವೂ ಗೊತ್ತು. ನಾನು ಆರಾಧಿಸುವುದಿಲ್ಲ, ಏಕೆಂದರೆ ನಾನು ಏಕತೆಯನ್ನು ಅನುಭವಿಸುತ್ತೇನೆ. ನಾನೇ ಅವನಾಗುತ್ತೇನೆ.

**23.11.2008**

ನಮ್ಮ ಜೀವನದಲ್ಲಿ ಬೆಳಕು ಅತ್ಯಂತ ಮುಖ್ಯವಾದ ಅಂಶವಾಗಿದೆ, ಏಕೆಂದರೆ ಬೆಳಕೇ ದೇವರು. ಬೆಳಕನ್ನು ತಿಳಿಯುವ ಉತ್ತಮವಾದ ಮಾರ್ಗವೆಂದರೆ ಬೆಳಕನ್ನು ಅನುಭವಿಸುವುದು. ನಾವು ಬೆಳಕನ್ನು ನಿಜವಾಗಿ ಮತ್ತು ಪೂರ್ಣವಾಗಿ ಅನುಭವಿಸಿದಾಗ ಪ್ರಶ್ನೆಗಳನ್ನು ಕೇಳುವುದು ನಿಲ್ಲಿಸುತ್ತೇವೆ. ಅಲೆಯುವುದನ್ನು ನಿಲ್ಲಿಸುತ್ತೇವೆ, ಕ್ಷುಲ್ಲಕ ಕಾರಣಗಳಿಗಾಗಿ ಋಷಿಗಳನ್ನು ಪ್ರಾರ್ಥಿಸುವುದನ್ನು ನಿಲ್ಲಿಸುತ್ತೇವೆ. ಬೆಳಕನ್ನು ಬಲ್ಲ ವ್ಯಕ್ತಿ ಯಾವುದಕ್ಕೂ ಬೇಡುವುದಿಲ್ಲ, ಏಕೆಂದರೆ ಏನನ್ನೂ ಕೇಳದೆ ಎಲ್ಲವೂ ತಾನಾಗಿಯೇ ಸಿಗುತ್ತದೆ. ನಾವು ಬೆಳಕಿನ ಬಗ್ಗೆ ಅರಿವನ್ನು ಹೊಂದಿರಬೇಕು ಅಷ್ಟೆ.

ಬೆಳಕನ್ನು ಅನುಭವಿಸಿರುವ ವ್ಯಕ್ತಿ ಗೊಣಗುವುದು, ದೂರುವುದು ಮತ್ತು ಇನ್ನೊಬ್ಬರ ಬಗ್ಗೆ ಹರಟುವುದನ್ನು ನಿಲ್ಲಿಸುತ್ತಾನೆ. ಸಿನಿಕತೆ ಮತ್ತು ಅ–ಪ್ರೀತಿ ನಿರ್ನಾಮವಾಗುತ್ತದೆ. ನಾವು ನಿಶ್ಚಲರಾಗುತ್ತೇವೆ. ವಿವೇಕಿಗಳಾಗುತ್ತೇವೆ ಮತ್ತು ಮಾನಸಿಕವಾಗಿ ಶಕ್ತಿವಂತರಾಗುತ್ತೇವೆ.

ಒಮ್ಮೆ ಬೆಳಕನ್ನು ಅನುಭವಿಸಿದರೆ, ಇವೆಲ್ಲವೂ ಮತ್ತು ಇವುಗಳಿಗಿಂತ ಹೆಚ್ಚಿನವು ನಮಗೆ ದೊರಕುತ್ತವೆ. ನಮ್ಮ ಬಾಳೇ ಪರಿವರ್ತನೆಯಾಗುತ್ತದೆ. ಪ್ರತಿಯೊಂದು ನಡೆ, ನುಡಿ, ನೋಡುವ ದೃಷ್ಟಿ ವಿಭಿನ್ನವಾಗಿರುತ್ತವೆ, ನಮ್ಮ ಸಾಧನೆ ಉನ್ನತ ಹಂತಕ್ಕೆ ಏರುತ್ತದೆ. ನಾವು ಬೆಳಕನ್ನು ಅನುಭವಿಸಿದಾಗ, ನಮ್ಮ ಕರ್ಮಗಳೆಲ್ಲಾ ನಿವಾರಣೆಯಾಗುತ್ತವೆ. ಎಲ್ಲ ರೀತಿಯ ಬಂಧನಗಳಿಂದ ನಾವು ಮುಕ್ತರಾಗುತ್ತೇವೆ ಮತ್ತು ಪರಮೋನ್ನತ ಸ್ವಾತಂತ್ರ್ಯವೆನಿಸಿದ ಮುಕ್ತಿಯನ್ನು ಪಡೆಯುತ್ತೇವೆ.

ನಾವು ನಮ್ಮ ಬಾಲ್ಯಕ್ಕೆ ಮರಳಿ ಹೋಗಬೇಕು ಮತ್ತು ಮುಗ್ಧರಾಗಬೇಕು. ಮುಗ್ಧತೆ ಎಂದರೆ ಪರಿಶುದ್ಧತೆ ಮತ್ತು ಪ್ರೇಮ. ಒಂದು ಮಗು ಎಲ್ಲ ರೀತಿಯಲ್ಲಿ ಮತ್ತು ಹಂತಗಳಲ್ಲಿ ಅಂದರೆ ಭೌತಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕವಾಗಿ ಪರಿಶುದ್ಧವಾಗಿರುತ್ತದೆ. ಮುಗ್ಧತೆ ಎಂದರೆ ಸತ್ಯ, ಪೂರ್ವಾಗ್ರಹವಿಲ್ಲದ್ದು, ತೀರ್ಮಾನಗಳು ಇಲ್ಲದ್ದು, ತಿರಸ್ಕಾರವಿಲ್ಲದ್ದು, ಹೊಟ್ಟೆಕಿಚ್ಚು ಇಲ್ಲದ್ದು, ಆಕ್ರಮಣಕಾರಿಯಲ್ಲದ್ದು, ಸ್ವಾರ್ಥವಿಲ್ಲದ್ದು, ಹಠಮಾರಿತನವಿಲ್ಲದ್ದು ಮತ್ತು ಪ್ರಪಂಚದ ಯಾರೊಂದಿಗೂ ಘರ್ಷಣೆ ಇಲ್ಲದ್ದು. ಮುಗ್ಧತೆಗೆ ಭಯವಿಲ್ಲ. ಮುಗ್ಧತೆ ಎಂದರೆ ಎಲ್ಲದಕ್ಕೂ ವಿಸ್ಮಯಪಡುವುದು. ಪ್ರತಿಯೊಂದು ಬಾರಿ ನಿಸರ್ಗವನ್ನು ನೋಡಿದಾಗಲೂ ಮೊಟ್ಟಮೊದಲ ಬಾರಿಗೆ ನೋಡಿದಂತೆ ಆಶ್ಚರ್ಯಪಡಬೇಕು, ಭಾವೋದ್ರೇಕದಿಂದ ಮತ್ತು ಸಂತೋಷದಿಂದ ಕುಣಿಯಬೇಕು. ಮುಗ್ಧತೆಯ ಸಾರವೇ ವಿಸ್ಮಯ ಮತ್ತು ಮುಗ್ಧತೆ ದೈವದೊಂದಿಗೆ ಕೂಡಿಕೊಂಡಿದೆ.

ಇವೆಲ್ಲವೂ ಸಾಧ್ಯ ಮತ್ತು ಇವುಗಳಿಗೆ ಮಹತ್ವವಾದ ಪ್ರಯತ್ನದ ಅಗತ್ಯವಿಲ್ಲ. ನಾವು ಆರಿಸಿಕೊಂಡು, ಪ್ರಯತ್ನಪಡಬೇಕು. ನಾವು ಮುಗ್ಧರಾಗಿರಲು ಮನಸ್ಸು ಮಾಡಬೇಕು. ಆಗ ಮುಗ್ಧರಾಗುತ್ತೇವೆ.

## ಭಾನುವಾರದ ಉಪನ್ಯಾಸಗಳು

(ಸಂಗ್ರಹ: ದೇವಿಲತಾ, ಅನು: ವಿಶ್ವನಾಥ್ ಎಂ.ಎನ್.)

### 2–11–2008

ಜಗತ್ತು ಹೆಚ್ಚಿನ ತೀವ್ರತೆಯಿಂದ ಪ್ರಳಯವನ್ನು ಹಾದುಹೋಗುತ್ತಿದೆ. ಕಲಿಯುಗದ ಸ್ಥಾಪಿತ ವ್ಯವಸ್ಥೆಗಳು ಕುಸಿಯುತ್ತ, ಮೌಲ್ಯಾಧಾರಿತ ಅಜ್ಞಾತ ಹೊಸ ವ್ಯವಸ್ಥೆಗಳಿಗೆ ದಾರಿ ಮಾಡಿಕೊಡುತ್ತಿವೆ.

ಪ್ರಳಯದ ಚೈತನ್ಯಗಳ ಒಂದು ಪ್ರಭಾವವನ್ನು ಇಂದಿನ ಜಾಗತಿಕ ಆರ್ಥಿಕ ವ್ಯವಸ್ಥೆಯ ಕುಸಿತದಲ್ಲಿ ನಾವು ಕಾಣಬಹುದು. ದುರಾಸೆ ಮತ್ತು ಜೂಜಿನ ಗುಣಗಳಿಂದ ಕೂಡಿದ್ದ ಈ ಅರ್ಥ ವ್ಯವಸ್ಥೆಯ ಕುಸಿತದ ಹಿಂದೆ ಪ್ರಳಯದ ಚೈತನ್ಯಗಳ ಪ್ರಭಾವವಿದೆ ಎನ್ನುವುದು ಈ ರಂಗದ ತಜ್ಞರಿಗೆ ಇನ್ನೂ ಅರ್ಥವಾದಂತಿಲ್ಲ. ಫೋಟಾನ್ ಬೆಲ್ಟ್‌ನ ಪರಿಣಾಮದ ಬಗ್ಗೆ ಹೆಚ್ಚಿನ ಜನರಿಗೆ ಯಾವ ಮಾಹಿತಿಯೂ ಇಲ್ಲ. ನಮ್ಮ ಆರ್ಥಿಕ ತಜ್ಞರು ಮತ್ತು ರಾಜಕೀಯ ನಾಯಕರು ಕೇವಲ ಇಂದಿನ ಅರ್ಥ ವ್ಯವಸ್ಥೆಯನ್ನು ಸರಿಪಡಿಸುವತ್ತ ಗಮನ ಹರಿಸುತ್ತಿದ್ದು, 2012ರಲ್ಲಿ ನಮ್ಮ ವಾಸ್ತವ ಪ್ರಪಂಚ ಸಂಪೂರ್ಣವಾಗಿ ಬದಲಾದಾಗ ಈ ವ್ಯವಸ್ಥೆ ಹೇಗೆ ಕುಸಿದುಬೀಳುತ್ತದೆ ಎನ್ನುವುದನ್ನು ಇನ್ನೂ ಅರ್ಥಮಾಡಿಕೊಂಡಿಲ್ಲ.

ಕುಸಿದುಬೀಳುತ್ತಿರುವ ಇನ್ನೊಂದು ಪ್ರಮುಖ ರಂಗವೆಂದರೆ ಧಾರ್ಮಿಕ ವ್ಯವಸ್ಥೆ. ಧರ್ಮವೆಂದರೆ ಮಾನವ ನಿರ್ಮಿತ ಸಂಪ್ರದಾಯ, ರೀತಿ–ರಿವಾಜುಗಳ ಮೂಲಕ ದೇವರಿಗಾಗಿ ನಡೆಸುವ ಬಾಹ್ಯ ಹುಡುಕಾಟ. ಇವುಗಳು ನಮ್ಮನ್ನು ದೇವರಲ್ಲಿಗೆ ತಲುಪಿಸಲು ವಿಫಲವಾಗಿದೆ. 2012ರಲ್ಲಿ ಸಂಭವಿಸಲಿರುವ ತೀವ್ರ ಬದಲಾವಣೆಗಳಿಗೆ ಸಿದ್ಧಗೊಳ್ಳಲು ನಮಗೆ ಹೆಚ್ಚು ಕಾಲಾವಕಾಶವಿಲ್ಲ. ಇದು ಶೀಘ್ರವಾಗಿ ಹೊಂದಾಣಿಕೆ ಮತ್ತು ಮರು ಹೊಂದಾಣಿಕೆಗಳನ್ನು ಅಳವಡಿಸಿಕೊಳ್ಳಬೇಕಾದ ಕಾಲ. ಮನುಕುಲವನ್ನು ಮುನ್ನಡೆಸಲು ನಮ್ಮ ನಾಯಕರು ವಿಫಲರಾದರೂ ಋಷಿಗಳು ನಮ್ಮ ಕೈಬಿಡುವುದಿಲ್ಲ. ಅವರು ಇಡೀ ಮನುಕುಲವನ್ನು ಸಂಪರ್ಕಿಸಿ ಸೂಕ್ತವಾಗಿ ಮಾರ್ಗದರ್ಶಿಸುತ್ತಾರೆ.

—ಆನಂದ ಜಿ.

### 09–11–2008

ಇತ್ತೀಚೆಗೆ ಎಂಬತ್ತರ ಹಿರಿಯ ವ್ಯಕ್ತಿಯೊಬ್ಬರನ್ನು ಭೇಟಿಯಾದಾಗ ಅವರು ತಾವು ಪ್ರಕಟಿಸುವ ವಾರ್ತಾಪತ್ರದ ಒಂದು ಪ್ರತಿಯನ್ನು ನನಗೆ ಕೊಟ್ಟರು. ಅದರ ಹೆಚ್ಚಿನ ಲೇಖನಗಳನ್ನು ಅವರೇ ಬರೆದಿದ್ದರು. ಯಾವುದೇ ಹಿಂಜರಿಕೆಯಿಲ್ಲದೆ ಅವರು ವರ್ತಮಾನದ ಅನೇಕ ವಿದ್ಯಮಾನಗಳಿಗೆ ಯಾವ ಪರಿಹಾರಗಳನ್ನು ಅನುಸರಿಸಬಹುದು ಎನ್ನುವುದರ ಬಗ್ಗೆ ಬರೆದಿದ್ದರು.

ಗುರೂಜಿಯವರೊಂದಿಗೆ ಮಾತನಾಡುತ್ತ ಈ ವಿಚಾರವನ್ನೆತ್ತಿದಾಗ ಅವರು, 'ಆ ವ್ಯಕ್ತಿಯ ದೇಶಪ್ರೇಮ ಮತ್ತು ಜನರೆಡೆಗಿನ ಅವರ ಕಾಳಜಿ ಈ ಲೇಖನಗಳನ್ನು ಬರೆಸುತ್ತಿವೆ,' ಎಂದರು. ಅವರ ಉದ್ದೇಶ ಮತ್ತು ವಿಚಾರಗಳ ಹಿಂದಿನ ಪರಿಶುದ್ಧತೆಯ ಕಂಪನಗಳು ಜನರನ್ನು ತಲುಪುತ್ತವೆ. ಹೆಚ್ಚೆಚ್ಚು ಜನರು ಈ ಅಭಿಪ್ರಾಯಗಳಿಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದಾಗ, ಈ ಕಂಪನಗಳು ಸದೃಢಗೊಂಡು ವಾಸ್ತವವಾಗಿ ಪ್ರಕಟಗೊಳ್ಳುತ್ತವೆ. ಇಂಥ ವ್ಯಕ್ತಿಗಳು ಸುಮ್ಮನೆ ಸಮಾಜ, ದೇಶ ಮತ್ತು ಜಗತ್ತಿನ ಬಗ್ಗೆ ತಮ್ಮ ಆಲೋಚನೆ–ಭಾವನೆಗಳನ್ನು ವ್ಯಕ್ತಪಡಿಸುವ ಮೂಲಕವೇ ಎಲ್ಲರಿಗೂ ಅದ್ಭುತವಾದ ರೀತಿಯಲ್ಲಿ ನೆರವಾಗುತ್ತಾರೆ.

ಅಮೆರಿಕದ ಅಧ್ಯಕ್ಷರ ಚುನಾವಣಾ ಫಲಿತಾಂಶ ಹೊರಬೀಳುವ ಮೊದಲೇ ಹದಿಹರೆಯದ ಹುಡುಗಿಯೊಬ್ಬಳು, 'ಒಬಾಮಾ ನನ್ನ ಅಚ್ಚುಮೆಚ್ಚಿನ ವ್ಯಕ್ತಿ. ಆತನೇ ಗೆಲ್ಲಬೇಕು!' ಎಂದಳು. ಆಕೆಗೆ ರಾಜಕೀಯದ ಬಗ್ಗೆ ಏನು ತಿಳಿದಿರಲು ಸಾಧ್ಯ. ಒಬಾಮಾರ ಯಾವುದೋ ಗುಣ ಎಲ್ಲರ ಗಮನ ಸೆಳೆಯುತ್ತಿದೆ. ಅದು ಪ್ರಾಮಾಣಿಕತೆಯೇ? ಅವರ ಸಹಜ ನಡವಳಿಕೆಯೇ? ಅವರಲ್ಲಿನ ಏನನ್ನೋ ಕಂಡು ಜನರು, 'ಈ ವ್ಯಕ್ತಿ ಗೆಲ್ಲಲಿ', ಎನ್ನುತ್ತಾರೆ.

—ಜಯಂತ್ ದೇಶಪಾಂಡೆ.

### 16–11–2008

ಅನೇಕ ಸನ್ನಿವೇಶಗಳಲ್ಲಿ ನಮ್ಮ ತೀವ್ರ ಅಭಿಪ್ರಾಯಗಳಿಂದಾಗಿ, ಪ್ರತ್ಯೇಕತೆಯನ್ನು ಅನುಭವಿಸುತ್ತೇವೆ. ನಿಷ್ಪಕ್ಷಪಾತವಾಗಿ ಯೋಚಿಸಿದಾಗ ಇಂಥ ಅಭಿಪ್ರಾಯಗಳಲ್ಲಿನ ನ್ಯೂನತೆಗಳು ನಮಗೆ ತಿಳಿಯುತ್ತವೆ. ಇವುಗಳನ್ನು ಹೋಗಲಾಡಿಸಲು ನಾವು ಸತತವಾಗಿ ಪ್ರಯತ್ನಪಡಬೇಕು. ಇದು ಅಹಂ ಮತ್ತು ಆತ್ಮದ ಧ್ವನಿಗಳ ನಡುವಿನ ಘರ್ಷಣೆ. ನಾವು ಸಂದರ್ಭವನ್ನು ಪ್ರೀತಿಯಿಂದ ಒಪ್ಪಿಕೊಂಡಾಗ, ಎಲ್ಲ ಭಿನ್ನಾಭಿಪ್ರಾಯ, ಧೋರಣೆ, ನಂಬಿಕೆಗಳು ಈ ಪ್ರೀತಿಯಲ್ಲಿ ಲೀನವಾಗುತ್ತವೆ. ಪ್ರೀತಿಯು ಎಲ್ಲವನ್ನೂ ಸ್ವೀಕರಿಸಿ ಒಪ್ಪಿಕೊಳ್ಳುತ್ತದೆ.

ನಮ್ಮೊಳಗೆ ಸತತವಾದ ಆಲೋಚನೆ ಮತ್ತು ಭಾವನೆಗಳ ಪ್ರವಾಹವೇ ಹರಿಯುತ್ತಿರುತ್ತದೆ. ಆದರೆ ನಾವು ಎಂಥ ವ್ಯಕ್ತಿಯಾಗಬೇಕು ಎನ್ನುವ ಆಯ್ಕೆಯನ್ನು ನಾವೇ ಮಾಡಬೇಕು. ನಮ್ಮನ್ನು ಆಧ್ಯಾತ್ಮಿಕಗೊಳಿಸುವುದು, ಬಿಡುವುದು ಈ ಆಯ್ಕೆಯೇ. ಅಧ್ಯಾತ್ಮವೆಂದರೆ ಹಲವು ವರ್ಷಗಳ ಸಾಧನೆಯ ಫಲಿತಾಂಶವಲ್ಲ, ಅದು ದೇವರಲ್ಲಿ, ಬೆಳಕಿನಲ್ಲಿನ ನಮ್ಮ ಪ್ರತಿಕ್ಷಣದ ಚಲನೆ. ನಮ್ಮ ಸುತ್ತಲಿನ ಜನರ ಅಪರಿಮಿತ ಪ್ರೀತಿ, ಕಾಳಜಿ, ಹರಕೆ–ಹಾರೈಕೆಗಳು ನಿಜಕ್ಕೂ ನಮ್ಮನ್ನು ವಿನಮ್ರರನ್ನಾಗಿಸಿ, ಇವೆಲ್ಲಕ್ಕೂ ನಾವು ಅರ್ಹರೇ ಎಂದು ಯೋಚಿಸುವಂತೆ ಮಾಡುತ್ತದೆ. ಋಷಿಗಳಿಗೆ ಶ್ರುತಿಗೊಂಡು ಅವರ ಹಾದಿಯಲ್ಲಿ ನಡೆಯಲು ನಡೆಸುವ ಸರಳ ಪ್ರಯತ್ನವೇ ನಮ್ಮ ಬದುಕಿನಲ್ಲಿ ಎಲ್ಲ ರೀತಿಯ ಸಮೃದ್ಧಿಯನ್ನು ಆಕರ್ಷಿಸುತ್ತದೆ. ಈ ಸಮೃದ್ಧಿಯ ಚೈತನ್ಯಗಳ ತೀವ್ರತೆಯಲ್ಲಿ ನಮ್ಮೊಳಗಿನ 'ನಾನು' ಕರಗಿಹೋಗುತ್ತದೆ. ಬದುಕಿನಲ್ಲಿ ಆಗ ಸಮೃದ್ಧಿಯೊಂದೇ ಉಳಿಯುತ್ತದೆ.

–ಶ್ಯಾಮಲಾ ದೇವಿ

### 23–11–2008

ನಿರ್ಲಕ್ಷಿತ, ರೋಗಪೀಡಿತ ಗುಲಾಬಿಗಿಡಗಳನ್ನು ಪುನಃ ನಾನು ಕಾಳಜಿಯಿಂದ ನೋಡಿಕೊಂಡಾಗ ಅವು ಕ್ರಮೇಣ ನಳನಳಿಸಿ ಹೂಬಿಡಲು ಪ್ರಾರಂಭಿಸಿದವು. ನಾವು ಈ ಭೂಮಿಗೆ ಬಂದಾಗ ಸುಂದರವಾದ ದೇಹ–ಮನಸ್ಸು–ಬುದ್ಧಿಗಳೊಂದಿಗೆ ಬಂದಿದ್ದರೂ ಕ್ರಮೇಣ ಅವು ಬಾಡಿಹೋದವು. ತಮ್ಮ ಮೂಲ ಭವ್ಯತೆಯ ಅರಿವಿರುವವರು ಆಸಕ್ತಿ–ಪ್ರೀತಿಗಳಿಂದ ಆಧ್ಯಾತ್ಮಿಕ ಸಾಧನೆಯನ್ನು ಕೈಗೊಂಡು, ಯಶಸ್ಸನ್ನು ಕಾಣುತ್ತಾರೆ.

ನಮ್ಮ ಬದುಕಿನಲ್ಲಿ ಚಿಕ್ಕಪುಟ್ಟ ಘಟನೆಗಳು, ಸಂದರ್ಭಗಳಿಗೆ ಕೊರತೆಯಿರುವುದಿಲ್ಲ. ಸಾಮಾನ್ಯವಾಗಿ ನಾವು ಸಂಭ್ರಮಿಸಲು ಯಾವುದೋ ದೊಡ್ಡ ಘಟನೆ ಅಥವಾ ಸಂದರ್ಭಕ್ಕೆ ಕಾಯುತ್ತಿರುತ್ತೇವೆ. ಇದರಲ್ಲಿ ತಪ್ಪಿಲ್ಲವಾದರೂ ನಾವು ಚಿಕ್ಕ ಸನ್ನಿವೇಶಗಳನ್ನು ನಿರ್ಲಕ್ಷಿಸಬೇಕಿಲ್ಲ. ಈ ಸಣ್ಣ ಘಟನೆಗಳತ್ತ ಗಮನ ಹರಿಸುವುದರಿಂದ ನಮ್ಮಲ್ಲಿ ಉಲ್ಲಾಸ–ಉತ್ಸಾಹಗಳು ಅನಾಯಾಸವಾಗಿ ಮನೆ ಮಾಡುತ್ತವೆ. ಇವು ನಮ್ಮಲ್ಲಿ ಹುರುಪುತಂದು ಮಹತ್ತರ ಸಂಗತಿಗಳನ್ನು ಸಾಧಿಸಲು ನೆರವಾಗುತ್ತವೆ.

2012ನ್ನು ನಿರಾಯಾಸವಾಗಿ ದಾಟಬೇಕೆಂದರೆ ನಾವು ನಮ್ಮ ಬದುಕಿನ ರೀತಿ–ನೀತಿಗಳನ್ನು ಬದಲಾಯಿಸಿಕೊಳ್ಳಬೇಕು. ಸ್ವಲ್ಪವೇ ಪ್ರಯತ್ನದಿಂದ ನಾವು ಬಹಳಷ್ಟು ಸಾಧಿಸಬಹುದು ಎಂದು ಋಷಿಗಳು ಹೇಳುತ್ತಾರೆ. ಇದೊಂದು ಮಹತ್ತರವಾದ ಅವಕಾಶ. ಬೆಳಕಿನೊಂದಿಗೆ ಶ್ರುತಿಗೊಂಡು ಅದರಲ್ಲಿ ಬದುಕುವುದು ನಮ್ಮ ಧ್ಯೇಯವಾಗಬೇಕು. ಇಂಥ ಅವಕಾಶಗಳನ್ನು ನಾವು ತಪ್ಪಿಸಿಕೊಳ್ಳಬಾರದು. ಮತ್ತು ಇವು ಮಹಾಯುಗವೊಂದಕ್ಕೆ ಒಮ್ಮೆ ದೊರಕುವ ಅವಕಾಶಗಳು ಎನ್ನುವುದನ್ನು ನಾವು ಮರೆಯಬಾರದು.

–ಸುಧಾಕರ್ ಎಲ್.

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡದಲ್ಲಿ ಮತ್ತು ಮರಾಠಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಸ್ಕೀಂನಲ್ಲಿ ಪಥ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

ಸಂಗ್ರಹ ಮತ್ತು ಅನುವಾದ: ಶ್ಯಾಮಲಾದೇವಿ

ನಮ್ಮಲ್ಲಿ ನಿಶ್ಚಲತೆ ಹೆಚ್ಚಿದಷ್ಟೂ, ಚಿತ್ತಸ್ಥೈರ್ಯ ಹೆಚ್ಚುತ್ತದೆ. ಎಲ್ಲ ಆಧ್ಯಾತ್ಮಿಕ ಸಿದ್ಧಿಗಳ ತಳಹದಿ, ಸಮತ್ವ. ನೀವು ಹೇಳುವಂತೆ, "ಮೋಡಗಳು ಸೂರ್ಯನನ್ನು ಕೆಲಕಾಲ ಮರೆಮಾಡಬಹುದು ಅಷ್ಟೆ ಆದರೆ ಸೂರ್ಯನೇ ಕಾಣದಂತೆ ಮಾಡಲು ಅವುಗಳಿಂದ ಆಗುವುದಿಲ್ಲ." ಅಂತ್ಯದಲ್ಲಿ ಸತ್ಯ ಮತ್ತು ಬೆಳಕುಗಳಿಗೇ ಜಯ ಎಂಬುದು ನನ್ನ ಅಚಲ ನಂಬಿಕೆ. —ಹೈಡಿ ಶಾಲಿನಿ

"New Age Realities" ಪುಸ್ತಕ ತುಂಬಾ ಆಸಕ್ತಿಕರವಾಗಿದೆ. ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಹಲವು ಸಾರಿ ಓದಬೇಕು. ಅದರಲ್ಲಿರುವ ವಿಷಯಗಳ ಬಗ್ಗೆ ಧ್ಯಾನದ ತರಗತಿಗಳಲ್ಲಿ ಹೇಳಿದರೆ ಎಲ್ಲರೂ ಅರ್ಥ ಮಾಡಿಕೊಳ್ಳಬಹುದು ಎನ್ನಿಸುತ್ತದೆ. ಏಕೆಂದರೆ ವಿಷಯ–ತಜ್ಞರು ಹೇಳಿದಾಗ ಹೆಚ್ಚು ಸ್ಪಷ್ಟತೆ ಇರುತ್ತದೆ. —ಎಸ್.ಕೆ. ಉಮೇಶ್

"New Age Realities" ಪುಸ್ತಕದಲ್ಲಿ ಅಗಾಧವಾದ ಜ್ಞಾನವಿದೆ. ಸಾಮಾನ್ಯ ಓದುಗನಿಗೆ ಅರ್ಥವಾಗುವಂತೆ ಕ್ಲಿಷ್ಟ ವಿಷಯಗಳನ್ನು ಬಹಳ ಪ್ರಯತ್ನಪಟ್ಟು ಸರಳ ಭಾಷೆಯಲ್ಲಿ ಬರೆದಿದ್ದಾರೆ. ಅದರಲ್ಲಿರುವ ಜ್ಞಾನವನ್ನು ಅರ್ಥಮಾಡಿಕೊಳ್ಳಲು ಪುನಃ ಪುನಃ ಓದಬೇಕು. ಆಗ ಮಾತ್ರ ಪುಸ್ತಕದಲ್ಲಿರುವ ವಿಷಯಗಳನ್ನು ಆರಿಸಿಕೊಂಡು ಆಳವಾಗಿ ಚಿಂತನೆ ಮಾಡಲು ಸಾಧ್ಯ. —ವೈಶಾಲಿ

ಇತ್ತೀಚೆಗೆ ಬಿಡುಗಡೆಯಾದ ಎರಡು ಪುಸ್ತಕಗಳಲ್ಲಿ ಹೊಸ ಜ್ಞಾನವಿದೆ. ಮತ್ತು ಈ ಜ್ಞಾನದಲ್ಲಿ ಸ್ಪಷ್ಟತೆ ಇದೆ. ಅಧ್ಯಯನ ಕೇಂದ್ರದವರು ಈ ಅದ್ಭುತ ಪುಸ್ತಕಗಳನ್ನು ಹೊರತರಲು ಬಹಳ ಕಷ್ಟಪಟ್ಟು ಕೆಲಸಮಾಡಿದ್ದಾರೆ. —ಶೋಭಾರಾವ್

ಬೆಂಗಳೂರು ಪುಸ್ತಕೋತ್ಸವದಲ್ಲಿ ನಮ್ಮ ಸ್ಟಾಲ್ ತುಂಬಾ ಸುಂದರವಾಗಿತ್ತು. ಅಲ್ಲಿ ತುಂಬಿದ್ದ ಶಾಂತಿ ಮತ್ತು ವೈಶಾಲ್ಯತೆಗಳನ್ನು ನಾನು ಅನುಭವಿಸಿದೆ. ಅಲ್ಲಿದ್ದ ಪ್ರತಿಯೊಬ್ಬ ವಾಲಂಟಿಯರ್ ಹೊರಸೂಸುತ್ತಿದ್ದ ನಿಶ್ಚಲತೆ, ಶಾಂತಿ, ಮತ್ತು ಬೆಳಕನ್ನು ನಾನು ಗಮನಿಸಿದೆ. ಅಲ್ಲಿ ಪ್ರದರ್ಶಿಸಲ್ಪಟ್ಟಿದ್ದ 'Animation' ಭವ್ಯವಾಗಿತ್ತು. ಅದು ಎಲ್ಲವನ್ನೂ ಮೌನವಾಗಿ ತಿಳಿಸುತ್ತಿತ್ತು. ಅದರ ಬಗ್ಗೆ ಹೇಳಲು ನನ್ನಲ್ಲಿ ಪದಗಳೇ ಇಲ್ಲ. ರೇಡಿಯೋ–1ನಲ್ಲಿ ಬೆಳಕಿನ ಸಂಚಲನದ ಪ್ರಚಾರವನ್ನು ಕೇಳಿಸಿಕೊಂಡೆ. ತುಂಬಾ ಹಿತವೆನಿಸಿತು. ಸದ್ದಿಲ್ಲದೆ ನಾವು ಎಲ್ಲ ಜನರಲ್ಲಿ ಅರಿವನ್ನು ಮೂಡಿಸುತ್ತಿದ್ದೇವೆ ಎಂದು ನನಗೆ ಬಹಳ ಸಂತೋಷವಾಯಿತು. —ಎನ್. ಕಾರ್ತಿಕ್

## ವಿವೇಕದ ನುಡಿಗಳು

ಸಂಗ್ರಹ ಮತ್ತು ಅನುವಾದ: ನರೇಂದ್ರ ಬಾಬು

ದೇವರನ್ನು ತೃಪ್ತಿ ಪಡಿಸುವುದು ಸುಲಭ, ಆದರೆ ಮನುಷ್ಯನನ್ನು ತೃಪ್ತಿಪಡಿಸುವುದು ಬಹಳ ಕಷ್ಟ. —ಮಹರ್ಷಿ ಅಮರ

ಪ್ರೀತಿಯಿಂದ ಯಾರನ್ನಾದರೂ, ಏನನ್ನಾದರೂ ಗೆಲ್ಲಬಹುದು. —ಗುರೂಜಿ

ನಾನು ದೇವರನ್ನು ನೋಡುವ ಕಣ್ಣು ಮತ್ತು ದೇವರು ನನ್ನನ್ನು ನೋಡುವ ಕಣ್ಣು ಒಂದೇ. —ಮೈಸ್ಟರ್ ಎಕ್‌ಹಾರ್ಟ್

ಎದ್ದುನಿಂತು ಮಾತನಾಡಲು ಧೈರ್ಯಬೇಕು ಅಂತೆಯೇ ಸುಮ್ಮನೇ ಕುಳಿತು ಕೇಳಲೂ ಧೈರ್ಯಬೇಕು. —ವಿನ್‌ಸ್ಟನ್ ಚರ್ಚಿಲ್

ಆಧ್ಯಾತ್ಮಿಕತೆ ನಿನ್ನ ನಂಬಿಕೆಗೆ ಸಂಬಂಧಪಟ್ಟದ್ದಲ್ಲ, ನಿನ್ನ ಪ್ರಜ್ಞೆಯ ಸ್ಥಿತಿಗೆ ಸಂಬಂಧಪಟ್ಟದ್ದು. —ಎಕ್‌ಹಾರ್ಟ್ ಟೋಲ್

ನಮ್ಮನ್ನು ಪ್ರತಿಬಿಂಬಿಸುವುದು ನಾವು ಮಾಡುವ ಆಯ್ಕೆಗಳೇ ಹೊರತು, ನಮ್ಮ ಸಾಮರ್ಥ್ಯಗಳಲ್ಲ. —ಜೆ ಕೆ ರೌಲಿಂಗ್

ನಮ್ಮನ್ನು ಪ್ರಶಂಸಿಸುವವರನ್ನು ಯಾವಾಗಲೂ ಇಷ್ಟಪಡುತ್ತೇವೆ ಆದರೆ ನಾವು ಪ್ರಶಂಸಿಸುವವರನ್ನು, ಎಲ್ಲ ಕಾಲದಲ್ಲೂ ಇಷ್ಟಪಡುವುದಿಲ್ಲ. —ಫ್ರಾನ್ಸ್ವಾ ಡಿ ಲಾ ರೋಶೆಫೌಕಾಲ್ಡ್

ಸಂತೋಷವೆಂದರೆ ಪರಿಪೂರ್ಣತೆಯಿಂದ ಇರುವುದಲ್ಲ; ಅಪರಿಪೂರ್ಣತೆಯಿಂದ ಆಚೆ ನೋಡುವುದು. —ಅಜ್ಞಾತ ಲೇಖಕ

ನಿಮ್ಮನ್ನು ನಿಭಾಯಿಸಲು ಬುದ್ಧಿಯನ್ನು ಬಳಸಿ, ಇತರರನ್ನು ನಿಭಾಯಿಸಲು ಹೃದಯವನ್ನು ಬಳಸಿ. —ಡೊನಾಲ್ಡ್ ಲೈರ್ಡ್

ಏನನ್ನು ಮಾಡಲು ಹೆದರುತ್ತೀರೋ ಅದನ್ನೇ ಮಾಡಿ. —ರಾಲ್ಫ್ ವಾಲ್ಡೋ ಎಮರ್ಸನ್

ಪ್ರೇರಣೆಯ ನಂತರ ಪ್ರತಿಕ್ರಿಯೆಗೆ ಮುಂಚೆ ಆಯ್ಕೆ ಮಾಡಿಕೊಳ್ಳಲು ನಮಗೆ ಸ್ವಾತಂತ್ರ್ಯವಿದೆ. —ಸ್ಟೀಫನ್ ಕೋವೆ

ಕಷ್ಟಪಡದೆ ಕಳೆಯಲ್ಲದೆ ಮತ್ತೇನು ಬೆಳೆಯದು. —ಗೋರ್ಡನ್ ಬಿ. ಹಿಂಕ್ಲೆ

ಭವಿಷ್ಯವನ್ನು ತಿಳಿಯುವ ಅತ್ಯುತ್ತಮ ವಿಧಾನವೆಂದರೆ ಅದನ್ನು ರೂಪಿಸುವುದು. —ಹರ್ಷವರ್ಧನ್

ಯಶಸ್ಸಿಗೆ ಕೀಲಿಕೈ ನನಗೆ ತಿಳಿಯದು, ಆದರೆ ಸೋಲಿಗೆ ಕೀಲಿಕೈ ಎಂದರೆ ಎಲ್ಲರನ್ನೂ ತೃಪ್ತಿಪಡಿಸಲು ಪ್ರಯತ್ನಿಸುವುದು. —ಬಿಲ್ ಕೋಸ್ಬಿ

ನಮ್ಮ ಇಷ್ಟದಂತೆ ನಾವು ಬದುಕುವುದು ಸ್ವಾರ್ಥವಲ್ಲ. ಬೇರೆಯವರನ್ನು ನಮ್ಮ ಇಷ್ಟದಂತೆ ಬದುಕಲು ಬಯಸುವುದು ಸ್ವಾರ್ಥ. —ಆಸ್ಕರ್ ವೈಲ್ಡ್

ಬದುಕಲು ಪ್ರೀತಿಸಬೇಕು, ಪ್ರೀತಿಸಲು ಕಲಿಯಬೇಕು, ಕಲಿಯಲು ಬದುಕಬೇಕು. —ಜೆಫ್ ಲಡ್‌ವಿಗ್

ಸಂತೋಷದೆಡೆಗೆ ಒಂದು ಬಾಗಿಲು ಮುಚ್ಚಿದರೆ ಮತ್ತೊಂದು ತೆರೆಯುತ್ತದೆ; ಆದರೆ ನಾವು ಮುಚ್ಚಿರುವ ಬಾಗಿಲನ್ನೇ ನೋಡುತ್ತಾ, ತೆರೆದಿರುವ ಬಾಗಿಲನ್ನು ಗಮನಿಸುವುದಿಲ್ಲ. —ಹೆಲೆನ್ ಕೆಲ್ಲರ್

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್, ಅನು: ಶಿವಪ್ರಕಾಶ್ ಎಲ್)

**ಪ್ರ: ಒಳಗಿನ ಮತ್ತು ಹೊರಗಿನ ಶಾಂತಿಯನ್ನು ಹೇಗೆ ಜೋಡಿಸುವುದು?**

ಉ: ಅದರ ಅಗತ್ಯವಿಲ್ಲ. ನಿಮ್ಮೊಳಗೆ ಶಾಂತಿ ಇದ್ದರೆ, ಹೊರಗೆ ಕೂಡಾ ಶಾಂತಿ ಇರುತ್ತದೆ.

**ಪ್ರ: ನಿರಾಸೆಯೊಂದಿಗೆ ಹೇಗೆ ವ್ಯವಹರಿಸುವುದು?**

ಉ: ದೇವರು, ಬೆಳಕು ಮತ್ತು ಋಷಿಗಳ ಅಸ್ತಿತ್ವದ ಜಾಗೃತಿಯಿಂದ ನಿರಾಸೆಯನ್ನು ಕೈ ಬಿಡಬೇಕು. ಇವು ನಮ್ಮೊಳಗೆ, ನಮ್ಮ ಹತ್ತಿರ ಮತ್ತು ನಮ್ಮ ಸುತ್ತಮುತ್ತ ಇರುತ್ತವೆ. ಇವುಗಳೊಡನೆ ಸಂಪರ್ಕಿಸಲು ಈ ಜಾಗೃತಿ ಸಹಾಯ ಮಾಡುತ್ತದೆ. ಅಲ್ಲದೆ ರಕ್ಷಣೆ, ಭರವಸೆ ಮತ್ತು ಬಲವನ್ನು ತರುತ್ತದೆ. ನಿರಾಸೆಗೆ ಸ್ವಲ್ಪವೂ ಅವಕಾಶವಿರುವುದಿಲ್ಲ.

**ಪ್ರ: ಸಾಧನೆಗೆ ಧ್ಯಾನವೊಂದೇ ಸಹಾಯ ಮಾಡುತ್ತದೆಯೇ?**

ಉ: ಇಲ್ಲ. ಧ್ಯಾನ, ಶಂಬಲ ತತ್ವಗಳ ಅಭ್ಯಾಸ ಮತ್ತು ಎಲ್ಲ ಹಂತಗಳಲ್ಲಿ ಗುಣಾತ್ಮಕವಾಗಿರುವುದು ಸಾಧನೆಗೆ ಸಹಾಯ ಮಾಡುತ್ತದೆ. ನಾವು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಷ್ಟೆ.

**ಪ್ರ: ಮುಂದಿನ ಹಂತಕ್ಕೆ ಕೊಡುವ ದೀಕ್ಷೆ ನಮ್ಮ ಆಧ್ಯಾತ್ಮಿಕ ಬೆಳವಣಿಗೆಗೆ ಸಂಬಂಧ ಪಟ್ಟಿದೆಯೇ?**

ಉ: ಹೌದು. ಅದು ನಮ್ಮ ಆಧ್ಯಾತ್ಮಿಕ ಬೆಳವಣಿಗೆಗೆ ಸಂಬಂಧಿಸಿದೆ.

**ಪ್ರ: ನಾನು ಧ್ಯಾನಿಸುತ್ತಿರುವಾಗ ಶರೀರದೊಳಗೆ ಹೋದಂತೆ ಅನಿಸುತ್ತದೆ. ಏಕೆ?**

ಉ: ನಾವು ಧ್ಯಾನಿಸಲು ಪ್ರಾರಂಭಿಸಿದಾಗ ಹೊರಗಿನ ಪ್ರಪಂಚದೊಡನೆ ಇರುವ ನಮ್ಮ ಜಾಗೃತಿ ಕಳೆದುಹೋಗಿ ಅಂತರಂಗದ ಕಡೆಗೆ ತಿರುಗುತ್ತದೆ. ಇದೇ ಪ್ರತ್ಯಾಹಾರ. ಈ ವಿಧಾನ ಸಹಜವಾಗಿ ನಡೆಯುತ್ತದೆ. ನೀವು ಇದನ್ನು ಗಮನಿಸಿದ್ದೀರಿ.

**ಪ್ರ: ಧ್ಯಾನ ಮಾಡುವುದರಿಂದ ನಾವು ಚಿಕ್ಕವರಂತೆ ಕಾಣುತ್ತೇವೆಯೇ?**

ಉ: ಸಾಮಾನ್ಯವಾಗಿ, ಧ್ಯಾನ ನಮ್ಮನ್ನು ಆರೋಗ್ಯವಂತರನ್ನಾಗಿಸುತ್ತದೆ ಮತ್ತು ನಮ್ಮಲ್ಲಿ ಯುವಕರಲ್ಲಿರುವ ಹುಮ್ಮಸ್ಸಿರುತ್ತದೆ.

**ಪ್ರ: ಜಗತ್ತಿನ ಹಿಂಸೆಗಳಂತಹ ಸಮಸ್ಯೆಗಳಿಗೆ ಧ್ಯಾನಾಭ್ಯಾಸಿಗಳಾಗಿ ನಾವೇನು ಮಾಡಬೇಕು?**

ಉ: ಧ್ಯಾನಾಭ್ಯಾಸಿಗಳಾಗಿ ನಾವು ಬೇಕಾದಷ್ಟು ಮಾಡಬಹುದು. ಬೆಳಕನ್ನು ತರುವುದು, ಧ್ಯಾನದಲ್ಲಿ ಅದನ್ನು ಅನುಭವಿಸುವುದು, ಪ್ರಜ್ಞಾಪೂರ್ವಕವಾಗಿ ಬೆಳಕನ್ನು ಹರಡುವುದು ಮತ್ತು ಚಾನೆಲ್ ಮಾಡುವುದು. ನಾವು ಜಗತ್ತಿನ ಎಲ್ಲ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಪಿಸುತ್ತೇವೆ. ಧ್ಯಾನ ಮಾತ್ರ ಪರಿಹಾರಗಳನ್ನು ತರುತ್ತದೆ. ಏಕೆಂದರೆ ಧ್ಯಾನ ಮಾತ್ರ ಪರಿವರ್ತನೆ ತರುತ್ತದೆ.

**ಪ್ರ: ಸ್ತ್ರೀಧರ್ಮ ಎಂದರೇನು?**

ಉ: ಸ್ತ್ರೀಯ ಸಹಜ ಗುಣವೆಂದರೆ ಸಹನೆ, ಕಾಳಜಿವಹಿಸುವುದು ಮತ್ತು ಪ್ರೀತಿ. ಆಕೆಯ ವಯಸ್ಸು ಎಷ್ಟೇ ಇದ್ದರೂ ಅವಳು ತಾಯಿಯೇ. ಇದೇ ಅವಳ ಧರ್ಮ; ಅವಳ ಸ್ವಭಾವ.

**ಪ್ರ: ಶಿವನಿಂದ ಬರುವ ಚೈತನ್ಯಗಳು ಪ್ರಳಯದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆಯೇ?**

ಉ: ಹೌದು. ಆ ಚೈತನ್ಯಗಳು ಪ್ರಳಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ.

**ಪ್ರ: ದೇವರು ಈ ಸೃಷ್ಟಿಯನ್ನು ಏಕೆ ಮಾಡಿದ್ದಾನೆ?**

ಉ: ದೇವರಲ್ಲಿ ಸೃಷ್ಟಿ ಮಾಡಲು ಒಂದು ಇಚ್ಛೆ ಮತ್ತು ಕನಸು ಮೂಡಿತು. ಆದ್ದರಿಂದ ಈ ಸೃಷ್ಟಿಯನ್ನು ಮಾಡಿದನು.

**ಪ್ರ: ಏಂಜಲ್ಸ್ ಮತ್ತು ಫೇರಿಗಳು ಈಗಲೂ ಅಸ್ತಿತ್ವದಲ್ಲಿದ್ದಾರೆಯೇ?**

ಉ: ಹೌದು. ಪಾಶ್ಚಿಮಾತ್ಯ ದೇಶಗಳಲ್ಲಿ ಅವರನ್ನು ಏಂಜಲ್ಸ್ ಮತ್ತು ಫೇರಿಗಳು ಎಂದು ಕರೆಯುತ್ತಾರೆ. ಇಲ್ಲಿ ಅವರನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ.

**ಪ್ರ: ಪ್ರಾಣಿಗಳು ಕರ್ಮಗಳ ನಿಯಮಗಳಿಗೆ ಏಕೆ ಬದ್ಧವಾಗಿಲ್ಲ?**

ಉ: ಏಕೆಂದರೆ ನಮಗೆ ಇರುವ ಇಚ್ಛಾ ಸ್ವಾತಂತ್ರ್ಯ ಪ್ರಾಣಿಗಳಿಗೆ ಇಲ್ಲ.


**ಪ್ರ: ಒಂದು ಸಮಸ್ಯೆ ತರುವ ಪಾಠಗಳು ಎಲ್ಲರಿಗೂ ಒಂದೇ ಆಗಿರುತ್ತದೆಯೇ?**

ಉ: ಇಲ್ಲ. ಹಾಗೆ ಆಗುವುದಿಲ್ಲ. ಇಂತಹ ಪಾಠಗಳು ಪ್ರತಿಯೊಬ್ಬ ವ್ಯಕ್ತಿಯ ಆಧ್ಯಾತ್ಮಿಕ ಪರಿಸ್ಥಿತಿ ಮತ್ತು ಗ್ರಹಿಕೆಯ ಶಕ್ತಿಯನ್ನು ಅವಲಂಬಿಸಿರುತ್ತವೆ.


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| iGuruji | 150/- |
| Living in the Light of My Guru | 220/- |
| A Package from the Rishis (containing 5 Booklets) | 250/- |
| - How to Meditate | |
| - Dhyana Yoga | |
| - Descent of Soul | |
| - Practising Shambala Principles | |
| - Astral Ventures of A Modern Rishi | |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Patanjali Yoga Sutra | (out of print) |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಅನಿಸಿಕೆಗಳು | 120/- |
| ಋಷಿಗಳಿಂದ ಬಂದ ಕೊಡುಗೆ (ಐದು ಪುಸ್ತಕಗಳು) | 250/- |
| – ಧ್ಯಾನ ಮಾಡುವುದು ಹೇಗೆ | |
| – ಧ್ಯಾನ ಯೋಗ | |
| – ಆತ್ಮದ ಅವರೋಹಣ | |
| – ಶಂಬಲ ನಿಯಮಗಳ ಅಭ್ಯಾಸ | |
| – ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| ध्यान कैसे करे (Hindi) | 50/- |
| प्रकाशमय जीवन (Hindi) | 10/- |
| தியானம் செய்வது எப்படி | 50/- |
| ஒளியின் வாயில்கள் | 200/- |
| ஒளீயீல் வாழ்க்கை | 10/- |
| व्रूण टश्क्रि–स्ण य्ष्ट | 50/- |
| ''थ्ख्र् ्ण्टत्र–स्ण | 10/- |

RNI. No. KARKAN/2003/13739 Registered Postal Regn. No. CPMG/KA/SP/CNA-48/2006-08
Date of posting Newsletter-25th of Every Month. No. of Pages-8



## ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಷನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನ ದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸ ಲಾಗುತ್ತದೆ.

### ಸತ್ಸಂಗ

ಪ್ರತಿ ಶುಕ್ರವಾರ ಬೆಳಿಗ್ಗೆ 11ರಿಂದ 12ರವರೆಗೆ ತಪೋನಗರದಲ್ಲಿ ಗುರೂಜಿಯವರೊಂದಿಗೆ ಸಮೂಹ ಧ್ಯಾನವಿರುತ್ತದೆ. ಯಾರಾದರೂ ಇದರಲ್ಲಿ ಭಾಗವಹಿಸ ಬಹುದು.

### ಲೈಟ್ ಚಾನೆಲಿಂಗ್

ಪ್ರತಿ ಶುಕ್ರವಾರ ಮಧ್ಯಾಹ್ನ 12ರಿಂದ 1ರವರೆಗೆ ತಪೋನಗರದಲ್ಲಿ ಧ್ಯಾನಿಗಳು ಲೈಟ್ ಚಾನೆಲಿಂಗ್‌ಅನ್ನು ಮಾಡುತ್ತಾರೆ.

### ಹೀಲಿಂಗ್ ತರಗತಿಗಳು

ಪ್ರತಿ 5ನೇ ಭಾನುವಾರ, ಮಧ್ಯಾಹ್ನ 2ರಿಂದ 2.30ರವರೆಗೆ ತಪೋನಗರದಲ್ಲಿ ಹೀಲಿಂಗ್ ತರಗತಿ ನಡೆಯುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಷನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಸುಧಾಕರ್, ಅನು: ಸ್ವರ್ಣಲತ)

ಹಿಮವತ್‌ಗೋಪಾಲ ಬೆಟ್ಟಕ್ಕೆ ಹೋಗುವಾಗ, ಬೆಟ್ಟದ ದಾರಿ ತುಂಬಾ ಕಠಿಣವಾಗಿದ್ದು ನಮ್ಮ ವ್ಯಾನ್‌ಗೆ ಮೇಲೆ ಹತ್ತಲು ಬಹಳ ಕಷ್ಟವಾಯಿತು. ಆ ಸಮಯದಲ್ಲಿ ಗುರೂಜಿಯವರು ನೆನಪಿಗೆ ಬಂದು, ವ್ಯಾನ್‌ಗೆ ಬೆಳಕನ್ನು ಹರಿಸಲು ತಿಳಿಸಿದರು. ಅಂತೆಯೇ ನಾವಿಬ್ಬರು ವ್ಯಾನ್‌ಗೆ ಬೆಳಕನ್ನು ಹರಿಸಲು ಪ್ರಾರಂಭಿಸಿದೆವು. ಬೇರೆಲ್ಲರೂ ದೇವರ ನಾಮಸ್ಮರಣೆ ಮಾಡುತ್ತಿದ್ದರು. ನಮಗೆ ಹೇಗೆ ದಾರಿ ಸುಗಮವಾಗಿ ಸಾಗಿತೋ ತಿಳಿಯಲಿಲ್ಲ. ಗುರೂಜಿಯವರಿಗೆ ಅಲ್ಲಿಂದಲೇ ಧನ್ಯವಾದಗಳನ್ನರ್ಪಿಸಿದೆವು.

ಗುರೂಜಿಯವರು ಮೊದಲೇ ತಿಳಿಸಿದಂತೆ ನಮ್ಮ ಮನೆಯಲ್ಲಿ ಆಸ್ತಿ ವಿಚಾರ ಬಂತು. ಎಲ್ಲರೂ ಸಮನಾಗಿ ಹಂಚಿಕೊಳ್ಳುವಂತೆ ತೀರ್ಮಾನ ವಾಯಿತು. ಇದಕ್ಕೆಲ್ಲಾ ಕಾರಣ ಗುರೂಜಿಯವರು ಹೊಸದಾಗಿ ಹೇಳಿಕೊಟ್ಟಿರುವ ಬೆಳಕಿನ ಪ್ರಸಾರದ ಟೆಕ್‌ನಿಕ್. ಆಸ್ತಿಯ ವಿಚಾರಕ್ಕೆ ಕುಳಿತುಕೊಳ್ಳುವಾಗ ಗುರೂಜಿಯವರಿಗೆ ಲಿಂಕ್ ಮಾಡಿಕೊಂಡೆ. ಎಲ್ಲ ಕಾರ್ಯಗಳೂ ಸುಲಭವಾಗಿ ನಡೆದವು. —ಶ್ರೀಲತ

ನಾನು ಬೆಳಕಿನ ಗೋಳದೊಳಗೆ ಇರುವ ತಂತ್ರವನ್ನು ಅಭ್ಯಸಿಸುವಾಗ, "ಈ ಬೆಳಕಿನ ಗೋಳ ನಮ್ಮೊಳಗಿರುವ ಬೆಳಕೇ? ಏಕೆಂದರೆ ನಮ್ಮ ಆಂತರ್ಯದಲ್ಲಿ ಎಲ್ಲವೂ ಇದೆ. ಬೆಳಕಿನ ಗೋಳ ಆಂತರ್ಯದಿಂದಲೇ ಬರುತ್ತದೆ" ಎಂದು ಒಂದು ಆಲೋಚನೆ ಬಂತು. ಆಗ ನನ್ನ ಆಂತರ್ಯವನ್ನು ಒಂದು ಅತ್ಯಂತ ಪ್ರಕಾಶಮಾನವಾದ ಬೆಳಕಾಗಿ ಕಂಡೆ. ಅದರಿಂದ ಬೆಳಕು ಹೊರಹೊಮ್ಮಿ ನನ್ನ ಸುತ್ತ ಒಂದು ಗೋಳಾಕೃತಿ ಉಂಟಾಯಿತು.

ಒಂದು ಸಾರಿ ನಾನು ಶಂಬಲ ನಿಯಮ–1ನ್ನು ಅಭ್ಯಾಸ ಮಾಡುತ್ತಿರುವಾಗ ನನ್ನ ಆತ್ಮವು ಪರಬ್ರಹ್ಮಲೋಕದೆಡೆಗೆ ಸಾಗಿತು. ಅದು ನನ್ನ ದೇಹವನ್ನು ಬಿಟ್ಟನಂತರ ಬೆಳಕಿನ ಗೊಂಚಲಿನಂತೆ ಗೋಚರಿಸಿತು. ಅದು ಊರ್ಧ್ವಾಭಿಮುಖವಾಗಿ ಪ್ರಯಾಣಿಸಲು ಪ್ರಾರಂಭಿಸುತ್ತಿದ್ದಂತೆ ನನ್ನ ಪ್ರಾಣಮಯಕೋಶ ಸೂರ್ಯನನ್ನು ತಲುಪಿತು. ನಂತರ ಆತ್ಮವು ಬ್ರಹ್ಮಲೋಕವನ್ನು ತಲುಪಿತು. ಅಲ್ಲಿ ಅದು ತನ್ನ ಮನೋಮಯಕೋಶವನ್ನು ಬಿಟ್ಟು, ತನ್ನ ಪ್ರಯಾಣವನ್ನು ಮುಂದುವರೆಸಿತು. ವಿಜ್ಞಾನಮಯ ಕೋಶವನ್ನು ದೇವೀಲೋಕದಲ್ಲಿ ಬಿಟ್ಟು, ಪರಬ್ರಹ್ಮಲೋಕದ ಎಲ್ಲೆಯಲ್ಲಿ ಆನಂದಮಯ ಕೋಶವನ್ನು ಬಿಟ್ಟು, ಆತ್ಮವು ಒಂದು ಬೆಳಕಿನ ಕಣವಾಗಿ ಪರಬ್ರಹ್ಮಲೋಕವನ್ನು ಪ್ರವೇಶಿಸಿ, ಅದರಲ್ಲಿ ಒಂದಾಯಿತು. ಪರಬ್ರಹ್ಮ ಲೋಕವು ಮೇರೆಯಿಲ್ಲದ ಹೊನ್ನಿನ ಸಾಗರ ದಂತಿತ್ತು. ಅದರಲ್ಲಿ ಆತ್ಮವು ಒಂದು ಬೆಳಕಿನ ಕಣವಾಗಿ ಜೀವಿಸುತ್ತಿತ್ತು.

ಗುರೂಜಿಯವರು ಶಂಬಲ ವಿಶೇಷ ಗುಂಪಿನವರಿಗೆ ತಿಳಿಸಿರುವಂತೆ ನಾನು ನನ್ನ ಸುತ್ತ ಬೆಳಕಿನ ಗೋಳ ಮತ್ತು ಅದರ ಸುತ್ತ ಇರುವ ನೀಲಿ ಬೆಳಕಿನ ಕವಚದ ಅರಿವಿನಲ್ಲಿರಲು ಪ್ರಯತ್ನಿಸುತ್ತೇನೆ. ಕೆಲಸದ ವೇಳೆಯಲ್ಲಿ ನನ್ನ ಹೃದಯದ ಭಾಗದಲ್ಲಿ ಋಷಿಯ ಇರವನ್ನು ಮತ್ತು ನನ್ನೊಳಗಿರುವ ಬೆಳಕನ್ನು ಅನುಭವಿಸಲು ಪ್ರಯತ್ನಿಸುತ್ತೇನೆ. ಕೆಲವೇ ನಿಮಿಷ ಕಾಲಾವಕಾಶ ಸಿಕ್ಕರೂ ಶಂಬಲ ನಿಯಮ–1 ಮತ್ತು ಬೆಳಕಿನ ಗೋಳದ ಅಭ್ಯಾಸ ಮಾಡುತ್ತೇನೆ. ಇದು ನನಗೆ ಅನೇಕ ರೀತಿಯಲ್ಲಿ ಸಹಾಯವಾಗಿದೆ. ಮೊದಲು ನನಗೆ ಬೇರೆಯವರ ಬಗ್ಗೆ ಮಾತನಾಡುವ ಅಭ್ಯಾಸವಿತ್ತು. ಈಗ ಅಂಥ ಯೋಚನೆ ಬಂದ ತಕ್ಷಣ ನನ್ನಲ್ಲಿರುವ ಬೆಳಕು ಅದನ್ನು ತಡೆಯುತ್ತದೆ. ಈಗ ನನಗೆ ಬೇರೆಯವರ ತಪ್ಪಿನ ಬಗ್ಗೆ ಮಾತನಾಡಲು ಆಸಕ್ತಿಯೇ ಇಲ್ಲ. ಬೆಳಕು ನನ್ನಲ್ಲಿ ಈ ಅರಿವನ್ನು ಮೂಡಿಸಿದೆ.

ಒಬ್ಬರನ್ನು ನಾನು ಗೌರವಿಸಿದರೂ ಅವರ ಕ್ರಿಯೆಗಳನ್ನು ಒಪ್ಪುತ್ತಿರಲಿಲ್ಲ. ಗುರೂಜಿ ಯವರಿಂದ ಇಚ್ಛಾಸ್ವಾತಂತ್ರ್ಯದ ಬಗ್ಗೆ ತಿಳಿದನಂತರ ಈಗ ನಾನು ಅವರ ವರ್ತನೆಗಳಲ್ಲಿ ತಪ್ಪು ಹುಡುಕುವುದಿಲ್ಲ. ನನ್ನಂತೆಯೇ ಅವರಿಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯ ಇರುವುದರಿಂದ ತಮಗೆ ಸರಿ ಎನಿಸಿದ್ದನ್ನು ಮಾಡುತ್ತಾರೆ. ಅದರ ಬಗ್ಗೆ ತೀರ್ಮಾನಿಸಲು, ಅವರ ಇಚ್ಛಾಸ್ವಾತಂತ್ರ್ಯಕ್ಕೆ ಅಡ್ಡಿಬರಲು ನಾನು ಯಾರು? ಇದನ್ನು ಅರ್ಥ ಮಾಡಿಕೊಂಡಮೇಲೆ ವ್ಯಕ್ತಿಗಳನ್ನು ಅವರು ಇರುವಂತೆಯೇ ಒಪ್ಪಿಕೊಳ್ಳಲು ನನಗೆ ಸಾಧ್ಯವಾಗಿದೆ. —ಪ್ರಿಯಾಂಕ ಮಿಶ್ರ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149 ಮಾನಸ ಫೌಂಡೇಷನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಪ್ರಕಾಶನ ಸ್ಥಳ : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ